# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




**ಭಾರತೀಯತೆಯನ್ನು ಬೆಳಗಲಿ ಬೆಳಕಿನ ಹಬ್ಬ**

ಈ ದೀಪಾವಳಿಯಲ್ಲಿ ಸ್ವಭಾಷಾ-ಸ್ವಭೂಷಣ-ಸ್ವಭೋಜನಗಳು ನಡೆನುಡಿಗಳಲ್ಲಿ ಬರಲಿ, ಸ್ಥಳೀಯ ಉದ್ಯಮಗಳಿಗೆ ನಮ್ಮ ಬೆಂಬಲವಿರಲಿ, ಸ್ವದೇಶಿ ಸಂಸ್ಕೃತಿ ಅರಳಲಿ, ಸನಾತನ ಹಿಂದೂ ಸಂಪ್ರದಾಯಗಳ ಮಹತ್ವ ಅರಿವಾಗಲಿ, ಭಾರತೀಯ ಚಿಂತನೆ ವಿಶ್ವವನ್ನು ಬೆಳಗಲಿ.

ದೀಪಾವಳಿ ಹಬ್ಬದ ಶುಭಾಶಯಗಳು


ಸಂಪುಟ : 43 | ಸಂಚಿಕೆ : 06 | ಪ್ಲವ – ಆಶ್ವಯುಜ | ಕಲಿಯುಗಾಬ್ದ 5123 | 01-11-2021 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


# ಕನ್ನಡದ ತೇರನೆಳೆಯೋಣ ಬನ್ನಿ

ಕರ್ನಾಟಕ ಎಂಬುದೇನು ಹೆಸರೆ ಬರಿ ಮಣ್ಣಿಗೆ?
ಮಂತ್ರ ಕಣಾ! ಶಕ್ತಿ ಕಣಾ! ತಾಯಿ ಕಣಾ!
ದೇವಿ ಕಣಾ! ಬೆಂಕಿ ಕಣಾ! ಸಿಡಿಲು ಕಣಾ!
ಕಾವ ಕೊಲುವ ಒಲವ ಬಲವ ಪಡೆದ
ಚಲದ ಚಂಡಿ ಕಣಾ!
ಋಷಿಯ ಕಾಣ್ಬ ಕಣ್ಣಿಗೆ

ಎಂದು ರಾಷ್ಟ್ರಕವಿ ಕುವೆಂಪು ತಮ್ಮ 'ಅಖಂಡ ಕರ್ನಾಟಕ' ಎನ್ನುವ ಪದ್ಯದಲ್ಲಿ ಬರೆದರು. ಕರ್ನಾಟಕ ಏಕೀಕರಣದ ಆರಂಭದ ದಿನಗಳಲ್ಲಿ ಕುವೆಂಪು ಅವರು ಅಖಂಡ ಕರ್ನಾಟಕ ಸ್ಥಾಪನೆಯ ಕುರಿತು ಮಾತನಾಡಿದ ಕುರಿತು ಅಧಿಕಾರಸ್ಥರು ವಿವರಣೆ ಕೇಳಿ ನೀಡಲಾದ ನೋಟಿಸಿಗೆ ಅವರು ನೀಡಿದ ಉತ್ತರ ಇದು. ಕುವೆಂಪು ಅವರ ದೃಷ್ಟಿಯಲ್ಲಿ ಕರ್ನಾಟಕ ಕೇವಲ ಒಂದು ಭೂಭಾಗ ಅಥವಾ ಅದರ ಹೆಸರಾಗಿಲಿಲ್ಲ. ಕರ್ನಾಟಕದಲ್ಲಿ ಅವರು ತಾಯಿ ಭುವನೇಶ್ವರಿಯನ್ನು ಕಂಡರು, ಕನ್ನಡದಲ್ಲಿ ಮಂತ್ರವನ್ನು ಕಂಡರು, ಶಕ್ತಿಯನ್ನು ಕಂಡರು. ಹಾಗಾಗಿಯೇ ಅವರ ಋಷಿಮನ 'ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂದು ಹಾಡಲು ಸಾಧ್ಯವಾಯಿತು.

ಕರ್ನಾಟಕ ಏಕೀಕರಣಕ್ಕಾಗಿ ಶ್ರಮಿಸಿದ ಎಲ್ಲ ಹಿರಿಯ ಚೇತನಗಳಿಗೆ ಕನ್ನಡ ಭಾಷಿಕ ಪ್ರದೇಶಗಳನ್ನು ಒಗ್ಗೂಡಿಸುವುದು ಕೇವಲ ಭಾಷೆಯ ಅಭಿಮಾನದ ಕಾರಣದಿಂದಲ್ಲ. ಅದೊಂದು ರಾಷ್ಟ್ರೀಯ ಕಾರ್ಯವಾಗಿತ್ತು. ದೇಶದ ಹಿತವನ್ನು ಸಾಧಿಸುವ ಕಾರ್ಯವಾಗಿತ್ತು. ಹಾಗಾಗಿಯೇ ಇಂಗ್ಲೀಷ್ ಕಾವ್ಯಗಳಿಗೆ ಮನಸೋತಿದ್ದ ಬಿಎಂಶ್ರೀ ಮೈಸೂರಿನ ಬೀದಿಗಳಲ್ಲಿ 'ಕನ್ನಡಕ್ಕೆ ಜಯವಾಗಲಿ' ಎಂದು ಜಾಗಟೆ ಬಡಿಯುತ್ತ ಕರ್ನಾಟಕ ಏಕೀಕರಣದ ಚಳುವಳಿಗೆ ನಾಂದಿ ಹಾಡಿದರು. ಕನ್ನಡದ ಕಣ್ವರೆನಿಸಿದ ಅವರು ಕನ್ನಡ ಭಾಷೆಯಲ್ಲಿ ಸಾಹಿತ್ಯ ರಚಿಸಿ ಭಾಷೆಯನ್ನು ಬೆಳೆಸಿದ ಹತ್ತಾರು ಶಿಷ್ಯರನ್ನು ತಯಾರು ಮಾಡಿದರು. ತೆಲುಗು ಮಾತಾಡುತ್ತಿದ್ದ ಡಿವಿಜಿ, ಮರಾಠಿ ಮನೆಮಾತಾಗಿದ್ದ ಬೇಂದ್ರೆಯವರಾಗಲಿ, ತಮಿಳು ಮಾತಾಡುತ್ತಿದ್ದ ಮಾಸ್ತಿಯವರಾಗಲಿ, ಮಲೆಯಾಳಿ ಪ್ರದೇಶದ ಕಯ್ಯಾರ ಕಿಞ್ಞಣ್ಣ ರೈಗಳಿಗಾಗಲಿ, ಕೊಂಕಣಿ ಮನೆಮಾತಾಗಿದ್ದ ಗೋವಿಂದ ಪೈಗಳಾಗಲಿ ಕನ್ನಡ ಭಾಷೆಯನ್ನು ತಮ್ಮ ಹೃನ್ಮನಗಳಿಗೆ ಆಪ್ತವಾಗಿ ಕಂಡರು. ಅವರಿಗೆಲ್ಲ ಕನ್ನಡ ಭಾಷೆ ಭಾರತೀಯ ಸಂಸ್ಕೃತಿಯ ಜ್ಞಾನಸಾಧನೆಯ ಮಾಧ್ಯಮವಾಗಿತ್ತು.

ಇಂದು ಕನ್ನಡವೂ ಸೇರಿದಂತೆ ಭಾರತೀಯ ಭಾಷೆಗಳು ಒಂದು ರೀತಿಯ ಅಸ್ತಿತ್ವದ ತಳಮಳವನ್ನು ಎದುರಿಸುತ್ತಿವೆ. ಪ್ರಮುಖವಾಗಿ ಇಂಗ್ಲೀಷ್ ಭಾಷೆಯ ಹೊಡೆತ ಮತ್ತು ಭಾಷೆಯ ಮೂಲಕ ವಿದೇಶಿ ಸಂಸ್ಕೃತಿ ಸದ್ದಿಲ್ಲದೇ ನಮ್ಮ ಮನೆಯ ಪಡಸಾಲೆಯನ್ನು ಆಕ್ರಮಿಸುತ್ತಿರುವುದು ಎಚ್ಚರಿಕೆ ಸಂದೇಶವನ್ನು ನೀಡುತ್ತಿವೆ. ಹಾಗೆಂದು ಇಂದಿನ ಕಾಲಘಟ್ಟದಲ್ಲಿ ಶಿಕ್ಷಣ ಮತ್ತು ಉದ್ಯೋಗಗಳಿಗೆ ಅನಿವಾರ್ಯ ಎನ್ನುವ ಮಿಥ್ಯಾ ಭಾವನೆಯನ್ನು ಮೂಡಿಸಿರುವ ಜಾಗತಿಕ ಸಂಪರ್ಕ ಮಾಧ್ಯಮವಾಗಿ ಬೆಳೆದಿರುವ ಇಂಗ್ಲೀಷ್ ಭಾಷೆಯನ್ನು ಸಾರಾಸಗಟಾಗಿ ತಿರಸ್ಕರಿಸಲಾಗದ ಸನ್ನಿವೇಶದಲ್ಲಿಯೂ ನಾವಿದ್ದೇವೆ. ಹೀಗಿರುವಾಗ ನಮ್ಮ ಮಾತೃಭಾಷೆಯನ್ನು ಉಳಿಸಿಕೊಳ್ಳುವುದರ ಕುರಿತು ಮತ್ತು ಅದರ ಬೆಳವಣಿಗೆಯ ಕುರಿತು ಗಂಭೀರವಾಗಿ ಚಿಂತಿಸಬೇಕಾದ ಅಗತ್ಯವಿದೆ.

ಸಾವಿರಾರು ವರ್ಷಗಳ ಇತಿಹಾಸ ಮತ್ತು ಅಪಾರ ಜ್ಞಾನ ಸಂಪತ್ತು ಹೊಂದಿರುವ ನಮ್ಮ ಕನ್ನಡ ಇಂದಿನ ಅಗತ್ಯಗಳನ್ನು ಪೋರೈಸದಷ್ಟು ಬಡವಲ್ಲ. ಆದರೆ ಭಾಷೆ, ಸಾಹಿತ್ಯ, ಸಂಸ್ಕೃತಿ ಉಳಿಯಬೇಕಾದರೆ ಮನೆಯಿಂದಲೇ ಅದರ ಆರಂಭವಾಗಬೇಕು. ಹಾಗಾಗಿ ನಮ್ಮ



ಮನೆಬಳಕೆಯಲ್ಲಿ, ದಿನನಿತ್ಯದ ವ್ಯವಹಾರಗಳಲ್ಲಿ ಮಾತೃಭಾಷೆಯನ್ನು ಬಳಸಿದರೆ ಭಾಷೆಯ ಜೊತೆಗೆ ನಮ್ಮ ಸಂಪ್ರದಾಯಗಳೂ ಉಳಿಯಬಲ್ಲವು ಎನ್ನುವುದನ್ನು ನಾವು ಮನಗಾಣಬೇಕು. ಇದನ್ನು ವ್ಯಾವಹಾರಿಕವಾಗಿ ಸಾಧಿಸುವುದು ಹೇಗೆ ಅಂದರೆ – ಬಹುಭಾಷಾ ಜ್ಞಾನ ಭಾರತೀಯರಿಗೆ ಸಾಮಾನ್ಯ. ಯಾವುದೇ ವಿಶೇಷ ಪ್ರಯತ್ನವಿಲ್ಲದೇ ಒಂದಕ್ಕಿಂತ ಹೆಚ್ಚು ಭಾಷೆಗಳಲ್ಲಿ ಮಾತನಾಡುವುದು ನಮ್ಮಲ್ಲಿ ವಿಶೇಷವಲ್ಲ. ಮಕ್ಕಳಲ್ಲಿಯೂ ಸಹ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಸುಲಭವಾಗಿ ಕಲಿಯುವ ಸಾಮರ್ಥ್ಯವಿರುತ್ತದೆ ಎಂದು ವೈಜ್ಞಾನಿಕವಾಗಿ ದೃಢಪಟ್ಟಿದೆ. ಜಗದ ನಡುವಿನ ಅಂತರ ಕಿರಿದಾಗಿರುವ ಇಂದಿನ ದಿನಗಳಲ್ಲಿ ಹಲವು ಭಾಷೆಗಳನ್ನು ತಿಳಿದಿರುವುದು ಅನಿವಾರ್ಯವೂ ಹೌದು. ಬೆಂಗಳೂರಿನಂತಹ ನಗರದಲ್ಲಿ ಒಂದು ನೂರಕ್ಕೂ ಹೆಚ್ಚು ಬೇರೆ ಬೇರೆ ಭಾಷೆಗಳು ಆಡಲ್ಪಡುತ್ತವೆ ಎಂದು ಒಂದು ಅಧ್ಯಯನದಿಂದ ಕಂಡು ಬಂದಿದೆ. ಇಂತಹ ಸನ್ನಿವೇಶದಲ್ಲಿ ಇಂಗ್ಲೀಷ್‌ನಂತಹ ವಿದೇಶಿ ಭಾಷೆಯನ್ನು ಒಪ್ಪಿಕೊಳ್ಳುವುದರ ಜೊತೆಗೆ ನಮ್ಮ ಮಾತೃಭಾಷೆಯಾದ ಕನ್ನಡ, ಕರ್ನಾಟಕದಲ್ಲಿ ನಾವು ವಾಸಿಸುವ ಸ್ಥಳದ ವಿಶಿಷ್ಟ ಉಪಭಾಷೆಯನ್ನು ನಿತ್ಯದ ಬಳಕೆಯಲ್ಲಿ ಬಳಸಿ ಉಳಿಸುವುದು ಖಂಡಿತ ಕಷ್ಟವಲ್ಲ. ನಮ್ಮ ಮಾತೃಭಾಷೆ ಅದರಲ್ಲೂ ನಮ್ಮ ಸ್ಥಳೀಯ ಭಾಷೆ ಒಂದು ರೀತಿಯ ಆಪ್ತ ಭಾವನೆಯನ್ನು ಮೂಡಿಸುತ್ತದೆ ಎನ್ನುವುದು ಎಲ್ಲರ ಅನುಭವವಾಗಿದೆ.

ಇನ್ನೊಂದೆಡೆ ಭಾಷಾ ಅಸ್ಮಿತೆಯನ್ನು ಭಾವನಾತ್ಮಕವಾಗಿ ದುರುಪಯೋಗಪಡಿಸಿಕೊಂಡು ಭಿನ್ನ ಭಿನ್ನ ಭಾಷಿಕ ಜನರ ಮಧ್ಯೆ ಬಿರುಕನ್ನು ಮೂಡಿಸುವ, ಪ್ರಾಂತಗಳ ಮಧ್ಯೆ ದ್ವೇಷವನ್ನು ಬಿತ್ತುವ ಮತ್ತು ಭಾರತದ ಏಕತೆಯನ್ನು ಶಿಥಿಲಗೊಳಿಸುವ ಒಂದು ಹುನ್ನಾರ ನಡೆದುಕೊಂಡು ಬಂದಿದೆ. ಸ್ವಭಾಷಾ ಪ್ರೇಮದ ಹೆಸರಿನಲ್ಲಿ ಪರಭಾಷಾ ದ್ವೇಷವನ್ನು ಪೋಷಿಸುವ ಕಾರ್ಯವೂ ನಡೆಯುತ್ತಿದೆ. ಹಾಗೆಯೇ ಭಾಷಾಭಾವನೆಯನ್ನು ಎತ್ತಿಕಟ್ಟಿ ಗಡಿ, ನೆಲ, ಜಲ, ಕ್ರೀಡೆ, ಸಿನಿಮಾ, ತಿಂಡಿ, ತಿನಿಸುಗಳವರೆಗಿನ ವಿಷಯಗಳಲ್ಲಿ ಪ್ರತ್ಯೇಕತೆಯ ವಿಷಬೀಜವನ್ನು ಬಿತ್ತುವ ಕೆಲಸವನ್ನು ಜನಮಾನಸವನ್ನು ಒಡೆದು ವರ್ಗಸಂಘರ್ಷ ಹುಟ್ಟು ಹಾಕುವ ವಿಚಾರಧಾರೆಯ ಗುಂಪುಗಳು ನಡೆಸುತ್ತಿರುವುದನ್ನೂ ನಾವು ಕಾಣಬಹುದು. ಈ ರೀತಿ ಸಮಾಜ ಒಡೆದರೆ ರಾಜ್ಯಗಳು ಒಡೆದು ಬೇರೆಬೇರೆ ಆದರೆ, ದೇಶದ ಜನರು ಭಾಷೆಯ ಆಧಾರದಲ್ಲಿ ವೈರಿಗಳಾದರೆ ದೇಶ ಸುರಕ್ಷಿತವಾಗಿರಬಲ್ಲದೇ? ಮತಾಂಧ ಜಿಹಾದಿ ಭಯೋತ್ಪಾದಕರು, ಕಮ್ಯುನಿಸ್ಟ್ ಚೀನಾದ ದಾಳಿಗಳಿಂದ ನಮ್ಮನ್ನು ರಕ್ಷಿಸಿಕೊಳ್ಳುವುದು ಸಾಧ್ಯವೇ? ಹಾಗಾಗಿ ಈ ದಿಕ್ಕುತಪ್ಪಿಸಿ ಒಡೆಯುವ ವಿಚಾರಧಾರೆಗಳನ್ನು ಎಚ್ಚರಿಕೆಯಿಂದ ಗಮನಿಸಬೇಕಾದ ಅಗತ್ಯವಿದೆ. ಹಾಗೆಯೇ ರಾಜಕೀಯ ಲಾಬಕ್ಕೋಸ್ಕರ ಭಾಷಾ ಅಭಿಮಾನವನ್ನು ದುರುಪಯೋಗಗೊಳಿಸಿಕೊಳ್ಳುವ ಕ್ಷುದ್ರ ಯೋಜನೆಗಳ ಕುರಿತೂ ನಾವು ಎಚ್ಚರವಹಿಸಬೇಕಾದ ಅಗತ್ಯವಿದೆ.

ಇಂದು ಕನ್ನಡಕ್ಕೆ ಅಥವಾ ಯಾವುದೇ ಭಾರತೀಯ ಭಾಷೆಗೆ ಬೇಕಿರುವುದು ಪ್ರೀತಿಯೇ ಹೊರತು ಬೇರೆ ಭಾಷೆಯ ದ್ವೇಷವಲ್ಲ. ಕರ್ನಾಟಕದಲ್ಲಿ ನಡೆದಿರುವ ಪ್ರತಿ ಚಳುವಳಿಗಳು ಸಾತ್ವಿಕವಾಗಿ ಆರಂಭವಾಯಿತಾದರೂ, ನಂತರದಲ್ಲಿ ಕೆಲವು ಸ್ವಾರ್ಥ ಹಿತಾಸಕ್ತಿಗಳಿಂದಾಗಿ ಕನ್ನಡ ಹೋರಾಟ ಎಂದರೆ ಸಂಸ್ಕೃತವನ್ನು ವಿರೋಧಿಸುವ, ಹಿಂದಿಯನ್ನು ವಿರೋಧಿಸುವ ಕೆಲಸ ಎನ್ನುವಂತಾಗಿದೆ. ಆದರೆ ಯಾವುದೇ ಭಾಷೆಯಲ್ಲಿರುವ ಜ್ಞಾನ ಸಂಪತ್ತನ್ನು ಶೋಧಿಸಿ ಸಂಕಲನಗೊಳಿಸಿ ಪ್ರಸಾರಗೊಳಿಸುವುದು ನಿಜವಾಗಿ ಭಾಷೆಯ ಏಳಿಗೆಯ ಕಾರ್ಯ. ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆ ಜ್ಞಾನದ ಆಗರ. ಈ ಜ್ಞಾನವನ್ನು ಇಂದಿನ ಹಾಗೂ ಮುಂದಿನ ಪೀಳಿಗೆಗೆ ತಲುಪಿಸುವುದು ಭಾಷಾ ಹೋರಾಟದ ಮುಖ್ಯ ಕಾರ್ಯವಾಗಬೇಕು. ಕನ್ನಡದ ಅಸ್ಮಿತೆ ಎನ್ನುವುದ ದೇಶದ ಏಕತೆಗೆ ಹಾಗೂ ರಾಷ್ಟ್ರೀಯತೆಗೆ ವಿರೋಧವಾಗುವಂತಹ ಕೆಲಸವಲ್ಲ. ಕನ್ನಡದ ಹಿತಾಸಕ್ತಿಯು ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾಗಿ ಕೆಲಸ ಮಾಡಬೇಕು. ಕನ್ನಡಾಂಬೆಯ ಸೇವೆ ಭಾರತಾಂಬೆಯ ಸೇವೆಗಿಂತ ಭಿನ್ನವಲ್ಲ. ಪ್ರಾದೇಶಿಕ ಹಿತಾಸಕ್ತಿಯನ್ನು ಸ್ಥಾಪಿಸುವ ಮೂಲಕ ರಾಷ್ಟ್ರೀಯ ಹಿತವನ್ನು ಉಳಿಸುವ ಕಾರ್ಯವನ್ನು ನಿರ್ವಹಿಸಬೇಕಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾಯರು ತಮ್ಮ 'ಕರ್ನಾಟಕತ್ವದ ವಿಕಾಸ' ಪುಸ್ತಕದಲ್ಲಿ ಉಲ್ಲೇಖಿಸಿದ ಮಾತುಗಳು ನಮಗೆ ಮಾರ್ಗದರ್ಶಿಯಾಗಬಲ್ಲವು – "ಭಾರತಿದೇವಿಯು ಭುವನೇಶ್ವರಿದೇವಿಯ ಪ್ರತಿಮೆ. ಕರ್ನಾಟಕದೇವಿಯು ಭಾರತಾಂಬೆಯ ಪ್ರತಿಮೆ. ಭಾರತಿದೇವಿ ವಿಶಿಷ್ಟದೇವತೆ; ಕರ್ನಾಟಕದೇವಿ ಇಷ್ಟದೇವತೆ. ಆದಕಾರಣ, ರಾಸಕ್ರೀಡೆಯಲ್ಲಿ ಗೋಪಿಕಾಸ್ತ್ರೀಯರು ಹೇಗೆ ಒಬ್ಬನೇ ಕೃಷ್ಣನನ್ನು ತಮ್ಮ ತಮ್ಮ ಹತ್ತಿರವೇ ಕಾಣುತ್ತಿದ್ದರೋ, ಹಾಗೆ ರಾಷ್ಟ್ರೀಯತ್ವವನ್ನು ಹೊಸ ರಾಜ್ಯಗಳು ಸದಾ ತಮ್ಮ ಹತ್ತಿರವೇ ಕಾಣುತ್ತಿರಬೇಕು."

# ಸಂಸ್ಮರಣೆ ಸುಮಿತ್ರಾನಂದನ ಪಂತ್


**ಸುಮಿತ್ರಾನಂದನ ಪಂತ್**
**ಜ್ಞಾನಪೀಠ ಪುರಸ್ಕೃತರಾದ ಪ್ರಸಿದ್ಧ ಹಿಂದಿ ಕವಿಗಳು.**

ಸುಮಿತ್ರಾನಂದನ ಪಂತ್ ಅಲ್ಮೋರಾದ ಬಳಿ ಕೂರ್ಮಾಚಲ ಪ್ರದೇಶದ ಒಂದು ಹಳ್ಳಿ ಕೌಸಾನಿಯಲ್ಲಿ 1900ರ ಮೇ 20ರಂದು ಜನಿಸಿದರು. ಹುಟ್ಟಿದ ಕೆಲತಾಸುಗಳಲ್ಲಿ ತಾಯಿ ನಿಧನರಾದರು. ಹುಟ್ಟುತ್ತಲೇ ತಾಯಿಯ ಮಮತೆಯನ್ನು ಕಳೆದುಕೊಂಡ ಅವರು ಸೋದರತ್ತೆಯ ಮಡಿಲಲ್ಲಿ, ತಂದೆ ಗಂಗಾದತ್ತ ಮತ್ತು ಇತರ ಸಹೋದರರ ಆಶ್ರಯದಲ್ಲಿ ಬೆಳೆದರು. ಸುಮಿತ್ರಾನಂದನ ಪಂತ್ ತಾವು ಹುಟ್ಟಿ ಬೆಳೆದ ಪರಿಸರದಿಂದಾಗಿ ಮುಂದೆ ನಿಸರ್ಗಪ್ರಿಯ ಮಹಾಕವಿಯಾದರು. ಏಳು ವರ್ಷದ ವಯಸ್ಸಿನಲ್ಲಿಯೇ ಕಾವ್ಯ ರಚನೆಯನ್ನಾರಂಭಿಸಿದ ಇವರು ತಮ್ಮ 17ನೆಯ ವಯಸ್ಸಿನಲ್ಲಿ ಪ್ರೌಢ ಕಾವ್ಯ ರಚನೆಗೆ ಅಣಿಯಾದರು. ವಾರಾಣಾಸಿ ಮತ್ತು ಅಲಹಾಬಾದದಲ್ಲಿ ಉಚ್ಚ ಶಿಕ್ಷಣ ಪಡೆಯುತ್ತಿರುವಾಗ ಇವರ ಕಾವ್ಯಗಳು ಪ್ರಕಾಶಿತವಾದವು.

ತರುಣ ಸುಮಿತ್ರಾನಂದನ ಪಂತ್ ಗಾಂಧೀಜಿಯವರ ಕರೆಗೆ ಓಗೊಟ್ಟು ಕಾಲೇಜು ತೊರೆದರು; ಮೇಲೆ ಈ ತರುಣ ಕವಿ ತಮ್ಮ ಸಂಪೂರ್ಣ ಸಮಯವನ್ನು ಸಾಹಿತ್ಯ ಸೇವೆಗೆ ಮೀಸಲಿಟ್ಟರು. ಕಾಲಾಕಾಂಕರದಲ್ಲಿ ವಾಸ ಮಾಡಿಕೊಂಡಿದ್ದ ಹತ್ತು ವರ್ಷಗಳ ಅವಧಿಯಲ್ಲಿ ಅವರಿಗೆ ಗ್ರಾಮೀಣ ಜೀವನದ ನೈಜಮುಖವನ್ನು ಕಾಣುವ ಸುಯೋಗ ಒದಗಿತು. ಅನಂತರ ಲೋಕಾಯತನವೆಂಬ ಸಂಸ್ಕೃತಿ ಪೀಠವನ್ನು ಸ್ಥಾಪಿಸುವ ಒಂದು ಪ್ರಯತ್ನವೂ ನಡೆಯಿತು. ನೃತ್ಯಪಟು ಉದಯಶಂಕರರ ಕಲ್ಪನಾ ಚಿತ್ರದ ನಿರ್ಮಾಣ ಪ್ರಸಂಗದಲ್ಲಿ ಕವಿಗೆ ಪಾಂಡಿಚೇರಿಯಲ್ಲಿ ಮಹರ್ಷಿ ಅರವಿಂದರ ಭಾಗ್ಯ ದೊರೆಯಿತು. ಇವರ ಮೇಲೆ ಗಾಂಧಿ, ವಿವೇಕಾನಂದ, ರವೀಂದ್ರ, ಸರೋಜಿನಿ, ವರ್ಡ್ಸ್‌ವರ್ತ್, ಷೆಲ್ಲಿಯಂಥ ಮಹನೀಯರ ಪ್ರಭಾವವಿರುವುದನ್ನು ಸ್ಪಷ್ಟವಾಗಿ ಕಾಣಬಹುದು.

ಸುಮಿತ್ರಾನಂದನ ಪಂತ್ ಅವರ ಜೀವನ ಆಧುನಿಕ ಹಿಂದಿ ಕಾವ್ಯಧಾರೆಯಲ್ಲಿ ಹಾಸುಹೊಕ್ಕಾಗಿದೆ. ಅದರ ಎಲ್ಲ ಪ್ರಮುಖ ಕಾವ್ಯಪ್ರವೃತ್ತಿಗಳನ್ನು ಇವರ ಕಾವ್ಯದಲ್ಲಿ ಕಾಣಬಹುದು.

1. **ರಮ್ಯವಾದಿ ಕಾವ್ಯ**
   'ವೀಣಾ' (1918) ದಿಂದ 'ಗುಂಜನ' (1938) ವರೆಗೆ
2. **ಪ್ರಗತಿಶೀಲ ಕಾವ್ಯ**
   'ಯುಗಾಂತ' (1936) ದಿಂದ 'ಗ್ರಾಮ್ಯಾ' (1940) ವರೆಗೆ
3. **ದಾರ್ಶನಿಕ ಕಾವ್ಯ**
   'ಸ್ವರ್ಣಕಿರಣ' (1947) ಮತ್ತು ಅನಂತರದ ರಚನೆಗಳು.



ಹೀಗೆ ಮೂರು ಪ್ರವೃತ್ತಿಗಳನ್ನು ಇವರ ಕಾವ್ಯದಲ್ಲಿ ಕಾಣಬಹುದು. ಸುಮಿತ್ರಾನಂದನ ಪಂತ್ ಅವರ ಕಾವ್ಯಗಳು ಹಿಂದಿಯಲ್ಲಿ ಭಾವಗೀತೆಯ ಉತ್ತಮ ನಿದರ್ಶನಗಳಾಗಿವೆ. ಅವು ಸಂಪೂರ್ಣ ವ್ಯಕ್ತಿನಿಷ್ಠ. ಭಾವಾಭಿವ್ಯಕ್ತಿಗೆ ನಿಸರ್ಗವೇ ಮಾಧ್ಯಮ. ಅವರ ಮುಖ್ಯ ರಚನೆಗಳು ವೀಣಾ, ಉಚ್ಛ್ವಾಸ, ಗ್ರಂಥಿ, ಪಲ್ಲವ, ಗುಂಜನ, ಯುಗಾಂತ, ಯುಗವಾಣಿ, ಗ್ರಾಮ್ಯಾ, ಸ್ವರ್ಣಕಿರಣ, ಸ್ವರ್ಣಧೂಳಿ, ಯುಗಾಂತರ, ಯುಗಪಥ, ಉತ್ತರಾ, ರಜತಶಿಖರ (ರೂಪಕ), ಅತಿಮಾ, ವಾಣಿ, ಸೌವರ್ಣ (ರೂಪಕ), ಕಲಾ ಔರ್ ಬೂಢಾ ಚಾಂದ್ ಮುಂತಾದವು.

ಅವರ ಮೊದಲ ಸಂಕಲನವಾದ 'ವೀಣಾ'ದಲ್ಲಿ 65 ಕವನಗಳಿವೆ. ಇದರಲ್ಲಿ ಕವಿಯ ಬಾಲ ಚಾಂಚಲ್ಯ ವ್ಯಕ್ತವಾಗುತ್ತದೆ. ಇತರ ಕವಿಗಳ ಪ್ರಭಾವ ಅಲ್ಲಲ್ಲಿ ಕಾಣುತ್ತಿದ್ದರೂ ಕವಿಯ ನೈಸರ್ಗಿಕ ಪ್ರತಿಭೆ ಅಭಿವ್ಯಕ್ತವಾಗಿದೆ. ಛಂದಸ್ಸಿನ ನವೀನತೆ, ಹೊಸಭಾವಭಂಗಿ, ಶಬ್ದಚಯನದಲ್ಲೂ ಬೆಳೆ ಮನಸ್ಸಿನ ಕುರುಹು ಅಭಿವ್ಯಕ್ತವಾಗಿದೆ.

'ಪಲ್ಲವ' ಸಂಕಲನ 32 ಕವನಗಳ ಸಂಗ್ರಹ. ಇದರಲ್ಲಿಯ ಭಾವ ಪ್ರೌಢಿಮೆ ಕವಿಯ ಪ್ರತಿಭೆಯ ಪರಾಕಾಷ್ಠೆಯ ಕುರುಹಾಗಿದೆ. ಇದು ಕಲ್ಪನಾಶೀಲ ಕಿಶೋರ ಕವಿಯ ಸರ್ವೋತ್ಕೃಷ್ಟ ರಚನೆ ಎಂದೆನಿಸಿದೆ. ಇಲ್ಲಿನ ಭಾಷಾಶೈಲಿ ತನ್ನ ನಾವಿನ್ಯ, ಸ್ವತಂತ್ರ ಸ್ವರೂಪದಿಂದಾಗಿ ಹಿಂದಿ ಭಾಷೆಗೆ ಒಂದು ಕೊಡುಗೆಯಾಗಿದೆ.

'ಗುಂಜನ' ಸಂಕಲನ ವೀಣಾ ಹಾಗೂ ಪಲ್ಲವಗಳ ಪರಂಪರೆಯಲ್ಲಿ ಕೊನೆಯದು. ಇದು ಕವಿಯ ಹೊಸ ಕಾವ್ಯಪ್ರವೃತ್ತಿಗೆ ಸಂಕೇತವೂ ಆಗಿದೆ. ನಿಸರ್ಗದ ಸ್ವಪ್ನಲೋಕದಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಿದ್ದ ಕವಿ ಮೊದಲ ಸಲ ಭೂಮಿಗೆ ಇಳಿದು ಮಣ್ಣಿನ ವಾಸನೆಯನ್ನು ಸವಿದಿದ್ದಾನೆ. ಮಾನವನ ವಿವಿಧ ಸಮಸ್ಯೆಗಳು, ಅವನ ಸುಖ-ದುಃಖಗಳನ್ನು ಕುರಿತು ಚಿಂತಿಸಿದ್ದಾನೆ.


'ಸ್ವರ್ಣಕಿರಣ' ಪ್ರಗತಿಶೀಲಕಾವ್ಯದಿಂದ ಒಲವು ಅಧ್ಯಾತ್ಮದೆಡೆಗೆ ತಿರುಗಿದ್ದನ್ನು ಈ ಕೃತಿಯಲ್ಲಿ ಕಾಣಿಸುತ್ತದೆ. ಅಂತಃಕರಣದ ಪರಿವರ್ತನೆಯೇ ಮಾನವ ಕಲ್ಯಾಣಕ್ಕೆ ನಿಜವಾದ ದಾರಿ ಎಂಬ ಭಾವನೆ ಹೊಂದಿದ ಕವಿ ಅರವಿಂದ ದರ್ಶನದಿಂದ ಪ್ರಭಾವಿತರಾದ ಕವಿ ತಮ್ಮ ಕಾವ್ಯದಲ್ಲಿ ನವಚೇತನಾವಾದ, ನವಚೇತನೆಯ ವಿಕಾಸ, ದಿವ್ಯ ಕರುಣೆಯ ಅವರೋಹಣ, ಮಾನವ ಅಂತಃಕರಣ ರೂಪಾಂತರ ಮತ್ತು ಅತಿಮಾನವನ ಬಗೆಗೆ ಹಾಡತೊಡಗುತ್ತಾರೆ. ಇದರಲ್ಲಿ 32 ಕವನಗಳಿವೆ. ಅರವಿಂದ ದರ್ಶನದ ವಿವಿಧ ಮುಖಗಳ ಪರಿಚಯ ಮತ್ತು ಅದರಿಂದ ಮಾನವ ಕಲ್ಯಾಣದ ದಾರಿಯ ಬಗೆಗೆ ವಿವರವಾಗಿ ವಿವೇಚಿಸಿದ್ದಾರೆ.

ಈ ತೆರನ ಇನ್ನಿತರ ಕಾವ್ಯಗಳೂ ಅರವಿಂದ ದರ್ಶನದ ವಿಸ್ತೃತ ಪರಿಚಯ ಮಾಡಿ ಕೊಡುತ್ತವೆ. ವಿಶ್ವಕಲ್ಯಾಣದ ವಿಶ್ವಶಾಂತಿಯ ಬಗೆಗೆ ಕವಿ ಹಾಡುತ್ತ ಸಾಗಿದ್ದಾರೆ. ರೂಪಕಗಳಲ್ಲೂ ಕವಿಯ ಧೋರಣೆ ಇದೇ ದಿಶೆಯಲ್ಲಿ ಸಾಗುತ್ತದೆ. ಈ ಕಾವ್ಯಗಳ ಹೊರತಾಗಿ ಸುಮಿತ್ರಾನಂದನ ಪಂತ್ ಅವರು 'ಜ್ಯೋತ್ಸ್ನಾ' ಎಂಬ ನಾಟಕವನ್ನೂ, ಕೆಲವು ಕಥೆಗಳನ್ನೂ, 'ಗದ್ಯಪಥ'ವೆಂಬ ಸಮೀಕ್ಷಾ ಗ್ರಂಥವನ್ನೂ, ಸಾಠವರ್ಷ ಏಕ ರೇಖಾಂಕನ ಎಂಬ ಆತ್ಮಕಥೆಯನ್ನೂ ಬರೆದಿದ್ದಾರೆ.

ಸುಮಿತ್ರಾನಂದನ ಪಂತ್ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ (1968) ಮತ್ತು ಪದ್ಮಭೂಷಣ ಪ್ರಶಸ್ತಿಗಳು ಸಂದಿದ್ದವು. ಮಹಾನ್ ಕವಿ ಸುಮಿತ್ರಾನಂದನ ಪಂತ್ ಅವರು 1977ರ ಡಿಸೆಂಬರ್ 28ರಂದು ನಿಧನರಾದರು.

## ಪುಸ್ತಕ ಪರಿಚಯ

**ಪ್ರಬಂಧ ಸಂಚಯ**
**ಹೊ. ವೆ. ಶೇಷಾದ್ರಿಯವರ ಆಯ್ದ ಲೇಖನಗಳು**




ಸಂಕಲನ-ಸಂಪಾದನೆ: **ನಾ. ಡಿಸೋಜ**
ಪ್ರಕಾಶಕರು: **ರಾಷ್ಟ್ರೋತ್ಥಾನ ಸಾಹಿತ್ಯ**
ಬೆಲೆ: **ರೂ.225**

ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾಗಿ 'ಪರಿವ್ರಾಜಕ'ನಂತೆ ನಿರಂತರ ಪ್ರವಾಸ ಮಾಡುತ್ತ ಸಂಘಟನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದ ಹೊ ವೆ ಶೇಷಾದ್ರಿಯವರು ಬರವಣಿಗೆಯನ್ನು ವ್ರತದಂತೆ ನಡೆಸಿದವರು. ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಸಮಾನ ಹಿಡಿತ ಹೊಂದಿದ್ದ ಅವರು ಮೂರು ದಶಕಗಳಿಗೂ ಹೆಚ್ಚು ಕಾಲ ಅನೇಕ ಸಮಕಾಲೀನ ವಿಷಯಗಳ ಕುರಿತು ಗಂಭೀರ ಚಿಂತನೆಯಿಂದ ಕೂಡಿದ ಸುದೀರ್ಘ ಲೇಖನಗಳನ್ನು ಬರೆದರು. ಸಾಮಾಜಿಕ-ರಾಜಕೀಯ ಪ್ರಸಂಗಗಳು, ಮಾನವತೆ ಎದುರಿಸುತ್ತಿರುವ ಸಮಸ್ಯೆಗಳು, ಇತಿಹಾಸ-ವರ್ತಮಾನ, ಆಧುನಿಕ ನಾಗರಿಕತೆಯ ಅಂತರ್ವಿರೋಧಗಳು, ಮತಶ್ರದ್ಧೆ-ಧಾರ್ಮಿಕ-ಆಧ್ಯಾತ್ಮಿಕ ವಿಚಾರಗಳು, ಪರಿಸರ-ತಂತ್ರಜ್ಞಾನ-ವಿಜ್ಞಾನ, ಮುಷ್ಕರ-ಆಂದೋಲನ-ರಾಜಕೀಯ ವಿಪ್ಲವ ಹೀಗೆ ಅವರ ಲೇಖನಗಳು ಸ್ಪರ್ಶಿಸದ ವಿಷಯವೇ ಇಲ್ಲ. ಸಂಘಟನೆಯ ಕಾರ್ಯದ ಸುದೀರ್ಘ ಅನುಭವ ಮತ್ತು ಆಳವಾದ ಚಿಂತನೆಯಿಂದ ರಚಿತವಾದ ಈ ಬರಹಗಳು ಗಂಭೀರ ಅಧ್ಯಯನಕ್ಕೆ ಆಕರವಾಗಬಲ್ಲಂಥವಾಗಿವೆ. ಅನುವಾದ, ಸಂಪಾದನೆ, ಸ್ವತಂತ್ರ ಕೃತಿಗಳು ಸೇರಿ ಅವರು ರಚಿಸಿದ ಮೂವತ್ತೈದಕ್ಕೂ ಹೆಚ್ಚು ಕೃತಿಗಳು ಪ್ರಕಟವಾಗಿವೆ.

ಶೇಷಾದ್ರಿಯವರು ಮೂರು ದಶಕಗಳಿಗೂ ಹೆಚ್ಚುಕಾಲ 'ಉತ್ಥಾನ' ಮಾಸಪತ್ರಿಕೆಗೆ ಬರೆದ ಅಂಕಣಬರಹಗಳ ಸಂಕಲನಗಳಿಂದ ಆಯ್ದ ಲೇಖನಗಳ ಸಂಗ್ರಹ 'ಪ್ರಬಂಧ ಸಂಚಯ'. ಕನ್ನಡ ನಾಡಿನ ಹಿರಿಯ ಸಾಹಿತಿ-ಚಿಂತಕರಾದ ನಾ. ಡಿಸೋಜ ಅವರು ಈ ಲೇಖನಗಳನ್ನು ಆಯ್ದು ಸಂಕಲನ ಮಾಡಿದ್ದಾರೆ.

ರಾಷ್ಟ್ರೀಯ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ಆನ್‌ಲೈನ್‌ನಲ್ಲಿ ಖರೀದಿಸಲು
**www.sahityabooks.com** ಅಂತರ್ಜಾಲ ತಾಣಕ್ಕೆ ಭೇಟಿ ನೀಡಿ.

## ಎಲ್ಲೋ ಕೇಳಿದ ಕಥೆ

ಓರ್ವ ದೈವಭಕ್ತ ಭಿಕ್ಷುಕನಿದ್ದನು. ಭಿಕ್ಷೆಯೆತ್ತಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಆತನಿಗೆ ಮಾಡಲು ಬೇರಿನ್ನೇನು ಕೆಲಸವಿರಲಿಲ್ಲ, ಹಾಗಾಗಿ ಅವನು ದಿನಪೂರ್ತಿ ಭಗವಂತನ ನಾಮಜಪ ಮಾಡುತ್ತಿದ್ದನು. ಭಗವಂತನು ಅವನ ನಾಮಜಪದಿಂದ ಪ್ರಸನ್ನನಾಗಿ ಒಂದು ದಿನ ಅವನೆದುರು ಪ್ರಕಟವಾದನು. ಭಗವಂತನು 'ನಾನು ನಿನ್ನ ನಾಮಜಪದಿಂದ ಬಹಳ ಪ್ರಸನ್ನನಾಗಿದ್ದೇನೆ, ನಿನಗೆ ಬೇಕಾದದ್ದನ್ನು ಕೇಳು' ಎಂದು ಹೇಳಿದನು. ಆಗ ಭಿಕ್ಷುಕನಲ್ಲಿ ದುರಾಸೆ ಚಿಗುರೊಡೆಯಿತು. ಆತ ಭಗವಂತನಲ್ಲಿ 'ಚಿನ್ನದ ನಾಣ್ಯಗಳನ್ನು ಕೊಡು' ಎಂದು ಕೇಳಿದನು. ಭಗವಂತನು 'ಚಿನ್ನದ ನಾಣ್ಯಗಳನ್ನು ಯಾವ ಪಾತ್ರೆಯಲ್ಲಿ ತೆಗೆದುಕೊಳ್ಳುವೆ?' ಎಂದು ಕೇಳಿದಾಗ ಭಿಕ್ಷುಕನು ತನ್ನ ಹರುಕು ಅಂಗಿಯನ್ನು ಮುಂದೆ ಮಾಡಿದನು.

ಭಗವಂತನು ಚಿನ್ನದ ನಾಣ್ಯಗಳನ್ನು ಕೊಡುವ ಮೊದಲು 'ಎಲ್ಲಿಯವರೆಗೆ ನೀನು ಚಿನ್ನದ ನಾಣ್ಯಗಳನ್ನು ಕೇಳುವುದು ಬಿಡುವುದಿಲ್ಲ ಅಲ್ಲಿಯ ವರೆಗೆ ನಾನು ನಿನ್ನ ಅಂಗಿಯಲ್ಲಿ ಚಿನ್ನದ ನಾಣ್ಯಗಳನ್ನು ಹಾಕುತ್ತಲೇ ಇರುವೆನು ಆದರೆ ಭೂಮಿಯ ಮೇಲೆ ಚಿನ್ನದ ನಾಣ್ಯಗಳು ಬೀಳಬಾರದು. ನೆಲದ ಮೇಲೆ ಬಿದ್ದರೆ ಎಲ್ಲ ನಾಣ್ಯಗಳು ಮಣ್ಣಾಗುವವು' ಎಂದು ಹೇಳಿದನು. ಭಿಕ್ಷುಕನು ಒಪ್ಪಿಕೊಂಡ. ಭಗವಂತನು ಭಿಕ್ಷುಕನ ಅಂಗಿಯಲ್ಲಿ ಚಿನ್ನದ ನಾಣ್ಯಗಳನ್ನು ಹಾಕತೊಡಗಿದ. ಅಂಗಿಯು ತುಂಬುತ್ತ ಹೋಯಿತು ಹಾಗೂ ಭಿಕ್ಷುಕನ ದುರಾಸೆಯು ಹೆಚ್ಚುತ್ತ ಹೋಯಿತು. ಅವನು 'ಸಾಕು' ಎಂದು ಹೇಳಲಿಲ್ಲ, ದೇವರು ಕೊಡುವುದನ್ನು ನಿಲ್ಲಿಸಲಿಲ್ಲ. ಕೊನೆಯಲ್ಲಿ ಚಿನ್ನದ ನಾಣ್ಯಗಳ ಭಾರವನ್ನು ಆ ಅಂಗಿಯು ತಡೆದುಕೊಳ್ಳಲಿಲ್ಲ, ಅಂಗಿಯು ಹರಿದು ಹೋಯಿತು. ಇದರಿಂದ ಎಲ್ಲ ನಾಣ್ಯಗಳು ನೆಲದ ಮೇಲೆ ಬಿದ್ದು ಮಣ್ಣಾದವು.

ಮನಸ್ಸಿನಲ್ಲಿ ದುರಾಸೆ ಇರುವುದರಿಂದ ಇಷ್ಟೊಂದು ನಾಣ್ಯಗಳು ದೊರೆತರೂ ಭಿಕ್ಷುಕನು ಬಡವನಾಗಿಯೇ ಉಳಿದ. ನಮಗೆ ಯಾವಾಗಲೂ ಆನಂದದಿಂದ ಇರಬೇಕಿದ್ದರೆ ಸಿಕ್ಕಿರುವುದರಲ್ಲಿ ಸಂತೋಷದಿಂದ ಇರಲು ಕಲಿಯಬೇಕು.

ಹಸಿವೆಂಬ ಹೆಬ್ಬಾವು ಬಸುರ ಬಂದು ಹಿಡಿದಡೆ
ವಿಷವೇರಿತ್ತಯ್ಯಾ ಆಪಾದಮಸ್ತಕಕ್ಕೆ.
ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ
ವಸುಧೆಯೊಳಗೆ ಆತನೆ ಗಾರುಡಿಗ ಕಾಣಾ! ರಾಮನಾಥ.

– **ಜೇಡರ ದಾಸಿಮಯ್ಯ**

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಸುನೀಲ್ ಕುಲಕರ್ಣಿ, ರಾಧಾಕೃಷ್ಣ ಹೊಳ್ಳ, ಸತ್ಯನಾರಾಯಣ ಶಾನಭಾಗ

## ಕಾಶ್ಮೀರದಲ್ಲಿ ಮತ್ತೆ ಸದ್ದು ಮಾಡುತ್ತಿವೆ

# ಭಯೋತ್ಪಾದಕರ ಬಂದೂಕುಗಳು

ಅತ್ತ ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಅಧಿಕಾರ ಹಿಡಿಯುತ್ತಿದ್ದಂತೆ ಇತ್ತ ಕಾಶ್ಮೀರದಲ್ಲಿ ಜಿಹಾದಿ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳ ಉಗ್ರ ಚಟುವಟಿಕೆ ಚುರುಕಾಗುವುದು ಎನ್ನುವ ಆತಂಕ ನಿಜವಾಗುತ್ತಿದೆ. ಕಳೆದ ಕೆಲವು ವಾರಗಳಲ್ಲಿ ಕಾಶ್ಮೀರದಲ್ಲಿ 11 ನಾಗರಿಕರು ಭಯೋತ್ಪಾದಕರ ದಾಳಿಗೆ ಬಲಿಯಾದರು. ಇಲ್ಲಿ ಗಮನಿಸಬೇಕಾದ ಒಂದು ಪ್ರಮುಖ ಅಂಶವೆಂದರೆ ಹೊರರಾಜ್ಯದಿಂದ ವಲಸೆ ಬಂದು ನೆಲೆಸಿದವರು ಮತ್ತು ಸೇನೆಯೊಡನೆ ಸಂಪರ್ಕ-ಸಂಬಂಧ ಉಳ್ಳ ನಾಗರಿಕರನ್ನು ಗುರಿಯಾಗಿಸಿ ಈ ದಾಳಿಗಳು ನಡೆದಿವೆ ಎನ್ನುವುದು. ಉದಾಹರಣೆಗೆ ಇತ್ತೀಚೆಗೆ ಕುಲ್ಗಾಮ್‌ನಲ್ಲಿ ಈರ್ವರು ಬಿಹಾರಿ ಮೂಲದ ಕಾರ್ಮಿಕರನ್ನು ಉಗ್ರರು ಕೊಲೆಗೈದರು. ಗುಂಡಿಡುವ ಮುನ್ನ ಅವರು ವಲಸಿಗರು ಎಂದು ಖಚಿತಪಡಿಸಿಕೊಂಡಿದ್ದರು. ಅಕ್ಟೋಬರ್ ಮೊದಲವಾರ ಕೊಲೆಯಾದ ಮಹಮ್ಮದ್ ಶಫಿ ದಾರ್ ಮತ್ತು ಮಾಜಿದ್ ಅಹ್ಮದ್ ಗೋರಿ ಇವರಿಗೆ ಸೇನೆಯೊಂದಿಗೆ ಸಂಪರ್ಕವಿತ್ತೆಂದು ಉಗ್ರರು ಆರೋಪಿಸಿದ್ದರು. ಕಾಶ್ಮೀರಿ ಪಂಡಿತ ಸಮುದಾಯದ ಗಣ್ಯ ವ್ಯಕ್ತಿ ಮಕನ್ ಲಾಲ್ ಬಿಂದ್ರೂ, ಶ್ರೀನಗರದ ಸರ್ಕಾರಿ ಶಾಲೆಯ ಮುಖ್ಯಾಧ್ಯಾಪಕ ಸುಪಿಂದರ್ ಕೌರ್, ಅದೇ ಶಾಲೆ ಶಿಕ್ಷಕ ದೀಪಕ್ ಚಾಂದ್, ಬಂಡಿಪೋರಾದ ಟ್ಯಾಕ್ಸಿ ಸ್ಟಾಂಡ್ ಅಧ್ಯಕ್ಷ ಮಹಮ್ಮದ್ ಶಫಿ ಲೋನ್, ಬಿಹಾರ ಮೂಲದ ಬೀದಿ ಬದಿ ವ್ಯಾಪಾರಿ ವೀರೇಂದರ್ ಪಾಸ್ವಾನ್ ಹೀಗೆ ಅನೇಕ ನಾಗರಿಕರನ್ನು ಆರಿಸಿ ಕೊಲೆಗೈದಿದ್ದಾರೋ ಎನ್ನುವಂತೆ ವ್ಯವಸ್ಥಿತವಾಗಿ ಭಯವನ್ನು ಬಿತ್ತುವ ಕೆಲಸವನ್ನು ಉಗ್ರ ಸಂಘಟನೆಗಳು ನಡೆಸುತ್ತಿವೆ. ಭಯೋತ್ಪಾದಕ ನಿಗ್ರಹ ಕಾರ್ಯಾಚರಣೆಯಲ್ಲಿ ಸೇನೆಯೂ ಅನೇಕ ಸೈನಿಕರನ್ನು ಕಳೆದುಕೊಂಡಿದೆ. ಪಾಕಿಸ್ತಾನಿ ಮೂಲದ ಲಷ್ಕರ್-ಎ-ತೈಬಾ, ಹಿಜ್ಬುಲ್ ಮುಜಾಹಿದ್ದೀನ್ ಹಾಗೂ ಇತ್ತೀಚೆಗೆ ಮುನ್ನೆಲೆಗೆ ಬಂದ ದಿ ರೆಸಿಸ್ಟನ್ಸ್ ಫೋರ್ಸ್ ಅಲ್ಲದೇ ಹೊಸದಾಗಿ ಕೇಳಲ್ಪಟ್ಟ ಹರ್ಕತ್ 313 ಹೆಸರಿನ ಭಯೋತ್ಪಾದಕ ಗುಂಪು ದಾಳಿಯ ಹೊಣೆ ಹೊತ್ತಿವೆ.

ಕಣಿವೆಯಲ್ಲಿ ಕಟ್ಟೆಚ್ಚರ ವಹಿಸಲಾಗಿದ್ದು 700ಕ್ಕೂ ಹೆಚ್ಚು ಜನರನ್ನು ಉಗ್ರರೊಂದಿಗೆ ಸಂಪರ್ಕದ ಶಂಕೆಯ ಮೇಲೆ ವಿಚಾರಣೆ ನಡೆಸಲಾಗಿದೆ. ಅನಂತ್‌ನಾಗ್‌ನಲ್ಲಿರುವ ತುರ್ತು ವಿಮಾನ ನೆಲೆಯನ್ನು ಉಗ್ರರು ಗುರಿಯಾಗಿಸಬಹುದೆಂಬ ಹಿನ್ನೆಲೆಯಲ್ಲಿ ಬಿಗಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಗಡಿಯಲ್ಲಿ ನುಸುಳುವಿಕೆಯು ಹೆಚ್ಚಾಗಿರುವ ಗುಪ್ತ ಮಾಹಿತಿಯ ಜೊತೆಗೆ ವಿಶೇಷ ಉಗ್ರ ನಿಗ್ರಹ ಕಾರ್ಯಾಚರಣೆಗಳೂ ಚುರುಕಾಗಿವೆ.

ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಅಧಿಕಾರಕ್ಕೇರಿದಂತೆ ಉಗ್ರರ ನೈತಿಕ ಬಲ ಹೆಚ್ಚಾಗಿರುವುದು, ಅವರಿಗೆ ಅಲ್ಲಿ ಸುರಕ್ಷಿತ ನೆಲೆ ಸಿಗುವುದೆಂಬ ಭರವಸೆ ಹಾಗೂ ಸದ್ಯಕ್ಕೆ ನಿರುದ್ಯೋಗಿಗಳಾಗಿರುವ ತಾಲಿಬಾನ್ ಮುಜಾಹಿದ್ದೀನ್ ಕಾಲಾಳುಗಳನ್ನು ಕಾಶ್ಮೀರದತ್ತ ನುಸುಳಿಸಬಹುದೆಂಬ ವಿಶ್ಲೇಷಣೆಗಳು ಇತ್ತೀಚೆಗೆ ಹೆಚ್ಚಿದ ಉಗ್ರ ಚಟುವಟಿಕೆಗಳ ಹಿನ್ನೆಲೆಯಲ್ಲಿ ಮಹತ್ವ ಪಡೆದುಕೊಳ್ಳುತ್ತವೆ. ಹಾಗೆಯೇ 370 ಕೊನೆಗೊಂಡ ನಂತರ ಕಣಿವೆಯಲ್ಲಿ ಭಾರತವಿರೋಧಿ ಧೋರಣೆ ತಗ್ಗಿರುವುದು ಆರ್ಥಿಕ ಚಟುವಟಿಕೆಗಳ ಪ್ರಗತಿ ಇತ್ಯಾದಿಗಳು ಪ್ರತ್ಯೇಕತಾವಾದಿಗಳ ವಾದಕ್ಕೆ ಹಿನ್ನೆಡೆಯಾಗಿರುವುದೂ ಕೂಡ ಗಣನೀಯ ಅಂಶಗಳು. ಇತ್ತೀಚೆಗೆ ಪ್ರವಾಸಿ ಚಟುವಟಿಕೆ ಆರಂಭವಾದಾಗಿನಿಂದ ಕಣಿವೆಯ ಎಲ್ಲ ಲಾಡ್ಜ್-ರೆಸಾರ್ಟ್‌ಗಳು ತುಂಬಿ ತುಳುಕುತ್ತಿದ್ದವು.

---

ರಾಷ್ಟ್ರೋತ್ಥಾನ ಪರಿಷತ್‌ನ 'ತಪಸ್' ಪ್ರಕಲ್ಪದಲ್ಲಿ ತರಬೇತಿ ಪಡೆದ 9 ವಿದ್ಯಾರ್ಥಿಗಳು ಪ್ರಸಕ್ತ ಸಾಲಿನ ಜೆಇಇ ಅಡ್ವಾನ್ಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ದೇಶದ ಪ್ರತಿಷ್ಠಿತ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗಳಲ್ಲಿ ಇಂಜಿನಿಯರಿಂಗ್ ವಿದ್ಯಾಭ್ಯಾಸಕ್ಕೆ ಪ್ರವೇಶ ಪಡೆಯಲು ಅರ್ಹತೆ ಪಡೆದಿದ್ದಾರೆ. ರಾಷ್ಟ್ರೋತ್ಥಾನ ಪರಿಷತ್ ನಡೆಸುವ 'ತಪಸ್' ಪ್ರಕಲ್ಪದಲ್ಲಿ ಪ್ರತಿಭಾವಂತ ಆದರೆ ಆರ್ಥಿಕವಾಗಿ ಹಿಂದುಳಿದ ಗ್ರಾಮೀಣ ಕುಟುಂಬಗಳ ವಿದ್ಯಾರ್ಥಿಗಳನ್ನು ಗುರುತಿಸಿ ಹತ್ತನೆಯ ತರಗತಿಯ ನಂತರ ಎರಡು ವರ್ಷ ಪಿಯುಸಿ ಶಿಕ್ಷಣದ ಜೊತೆಗೆ ಐಐಟಿ ಪ್ರವೇಶ ಪರೀಕ್ಷೆಗೆ ಉಚಿತವಾಗಿ ವಸತಿಯ ಜೊತೆ ತರಬೇತಿ ನೀಡಲಾಗುತ್ತದೆ. ಇದುವರೆಗೆ ಅನೇಕ ಅಂತಹ ವಿದ್ಯಾರ್ಥಿಗಳು ತರಬೇತಿ ಪಡೆದು ಐಐಟಿ ಪ್ರವೇಶ ಪಡೆದಿದ್ದಾರೆ. ಹಾಗೆಯೇ ವಿದ್ಯಾರ್ಥಿನಿಯರ ತರಬೇತಿಗಾಗಿ 'ಸಾಧನಾ' ಪ್ರಕಲ್ಪವನ್ನು ರಾಷ್ಟ್ರೋತ್ಥಾನ ಪರಿಷತ್ ನಡೆಸುತ್ತದೆ. ಇದೀಗ 2022ನೇ ಸಾಲಿನ ಪ್ರವೇಶಾತಿಗಾಗಿ ಹತ್ತನೆಯ ತರಗತಿಯ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು ಹೆಚ್ಚಿನ ಮಾಹಿತಿಗೆ www.tapassaadhana.org ಜಾಲತಾಣವನ್ನು ನೋಡಬಹುದು.

---



ದಕ್ಷಿಣ ಅಂಡಮಾನಿನ 'ರಾಸ್' ದ್ವೀಪವನ್ನು 'ನೇತಾಜಿ ಸುಭಾಷ್ ಚಂದ್ರ ಬೋಸ್ ದ್ವೀಪ' ಎಂದು ಭಾರತ ಸರ್ಕಾರ ಮರುನಾಮಕರಣ ಮಾಡಿದೆ. ಪೋರ್ಟ್‌ಬ್ಲೇರ್‌ನಿಂದ ಪೂರ್ವಕ್ಕೆ ಸುಮಾರು 3 ಕಿಮಿ ದೂರದಲ್ಲಿರುವ ಈ ದ್ವೀಪವನ್ನು 1943ರಲ್ಲಿ ಎರಡನೆಯ ವಿಶ್ವಯುದ್ಧದ ಸಮಯದಲ್ಲಿ ಜಪಾನ್ ಸೇನೆ ವಶಗೊಳಿಸಿಕೊಂಡಿತ್ತು. ಆ ಸಮಯದಲ್ಲಿ ನೇತಾಜಿ ಈ ದ್ವೀಪದಲ್ಲಿ ಒಂದು ದಿವಸ ವಾಸವಾಗಿದ್ದರು ಅಲ್ಲದೇ ಅಲ್ಲಿನ ಸರ್ಕಾರಿ ನಿವಾಸದ ಮೇಲೆ ಭಾರತದ ಧ್ವಜವನ್ನು ಹಾರಿಸಿದ್ದರು. ಇದುವರೆಗೆ ಈ ದ್ವೀಪ ಈಸ್ಟ್ ಇಂಡಿಯಾ ಕಂಪನಿಯ ಸಾಗರ ಸರ್ವೇ ಇಲಾಖೆಯ ನೌಕರನಾಗಿದ್ದ ಡೇನಿಯಲ್ ರಾಸ್ ಹೆಸರು ಹೊತ್ತಿತ್ತು.

---

ಶ್ರೀರಾಮ ಮಂದಿರದ ಅಡಿಪಾಯದ ಮೊದಲ ಹಂತದ ಕೆಲಸ ಪೂರ್ಣಗೊಂಡಿದೆ ಮತ್ತು ಎರಡನೇ ಹಂತದ ನಿರ್ಮಾಣ ನವೆಂಬರ್ ಮಧ್ಯದಲ್ಲಿ ಪೂರ್ಣಗೊಳ್ಳಲಿದೆ; ಡಿಸೆಂಬರ್ 2023ರಿಂದ ಭಕ್ತರು 'ಗರ್ಭಗೃಹ'ದಲ್ಲಿ ವಿರಾಜಮಾದ ಶ್ರೀರಾಮನ ದರ್ಶನ ಪಡೆಯಬಹುದಾಗಿದೆ ಎಂದು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಅವರು ಅಯೋಧ್ಯೆಯಲ್ಲಿನ ರಾಮಮಂದಿರ ನಿರ್ಮಾಣದ ಬಗ್ಗೆ ಮಾಹಿತಿ ನೀಡಿದ್ದಾರೆ. ಭವ್ಯ ರಾಮಮಂದಿರ ಕನಿಷ್ಠ ಸಾವಿರದ ಐನೂರು ವರ್ಷಗಳ ಕಾಲ ಸುರಕ್ಷಿತವಾಗಿ ನಿಲ್ಲಬೇಕು ಎನ್ನುವ ದೃಷ್ಟಿಯಿಂದ ಅದರ ಅಡಿಪಾಯವನ್ನು ಆಧುನಿಕ ತಂತ್ರಜ್ಞಾನಗಳನ್ನು ಬಳಸಿ 20 ಪದರಗಳಲ್ಲಿ ನಿರ್ಮಿಸಲಾಗಿದೆ. ಮಂದಿರವು 360 ಅಡಿ ಉದ್ದ, 235 ಅಡಿ ಅಗಲ ಮತ್ತು 161 ಅಡಿ ಎತ್ತರದಲ್ಲಿ ನಿರ್ಮಾಣವಾಗಲಿದೆ ಎಂದು ವರದಿಗಳು ತಿಳಿಸಿವೆ. ಲಾರ್ಸನ್ ಮತ್ತು ಟ್ಯೂಬ್ರೊ ಸಂಸ್ಥೆ ಮಂದಿರ ನಿರ್ಮಾಣ ಕಾರ್ಯವನ್ನು ನಡೆಸುತ್ತಿದೆ.

---

ಕರ್ನಾಟಕ ಸರ್ಕಾರದ ಎಲ್ಲಾ ಸೇವೆಗಳ ಮಾಹಿತಿಯನ್ನು ಒಂದೇ ವೇದಿಕೆಯಲ್ಲಿ ಒದಗಿಸುವ ಮಾಹಿತಿಕಣಜ ಅಂತರ್ಜಾಲ ಪೋರ್ಟಲ್ ನವೀಕರಣಗೊಂಡು ಹೆಚ್ಚಿನ ಮಾಹಿತಿಗಳ ಜೊತೆಗೆ ಪುನರಾರಂಭವಾಗಿದೆ. ಈ ಪೋರ್ಟಲ್‌ನಲ್ಲಿ ಯಾವುದೇ ರೀತಿಯ ಲಾಗಿನ್ ಅಗತ್ಯ ಇಲ್ಲದೇ ಮತ್ತು ಆರ್‌ಟಿಐ ಅರ್ಜಿ ಸಲ್ಲಿಸದೆಯೇ ರಾಜ್ಯ ಸರ್ಕಾರದ ವಿವಿಧ ಯೋಜನೆ ಹಾಗೂ ಸೇವೆಗಳ ಮಾಹಿತಿ ಪಡೆಯಬಹುದು. ಇವುಗಳಲ್ಲಿ ಕಂದಾಯ ಇಲಾಖೆಯ ಪಹಣಿ-ನಕ್ಷೆ ಇತ್ಯಾದಿ, ನಾಡಕಚೇರಿಯ ಪ್ರಮಾಣಪತ್ರಗಳು, ಪಡಿತರ ಕೇಂದ್ರಗಳ ದಾಸ್ತಾನು ಸ್ಥಿತಿ ಮತ್ತು ವಿತರಣಾ ವಿವರಗಳು, ಪಿಂಚಣಿ ಫಲಾನುಭಾವಿಗಳ ಪಾವತಿ ವಿವರಗಳು, ಸರ್ಕಾರದ ಗೃಹ ನಿರ್ಮಾಣದ ಫಲಾನುಭಾವಿಗಳ ವಿವರಗಳು, ವಿದ್ಯಾರ್ಥಿ ವೇತನದ ವಿವರಗಳು, ಸಾಲ ಮನ್ನಾ- ಪರಿಹಾರ ಯೋಜನೆ, ಪಂಚಾಯತ್ ಜನಪ್ರತಿನಿಧಿಗಳ ಮಾಹಿತಿ, ಪಂಚಾಯತ್-ವಾರ್ಡ್‌ಗಳಲ್ಲಿ ಕೈಗೊಂಡ ಕಾಮಗಾರಿಗಳು, ಸರ್ಕಾರ ಮತ್ತು ಸರ್ಕಾರಿ ಅನುದಾನಿತ ಶಾಲೆಗಳ ವಿವರಗಳು ಹೀಗೆ ಒಟ್ಟೂ 50 ಇಲಾಖೆಗಳ 167 ಸೇವೆ-ಮಾಹಿತಿಗಳು ಸಿಗುತ್ತವೆ. ಸುಲಭವಾಗಿ ಮಾಹಿತಿ ಪಡೆಯಲು ಅನುವಾಗುವಂತೆ ಕನ್ನಡ ಭಾಷೆಯಲ್ಲಿ ಈ ಜಾಲತಾಣ ರೂಪುಗೊಂಡಿದೆ. ಆಸಕ್ತರು https://mahitikanaja.karnataka.gov.in/ ಜಾಲತಾಣಕ್ಕೆ ಭೇಟಿ ನೀಡಬಹುದು.

---

ಕಳೆದ ವಿಜಯದಶಮಿಯ ದಿವಸ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಏಳು ಹೊಸ ರಕ್ಷಣಾ ಕಂಪನಿಗಳನ್ನು ರಾಷ್ಟ್ರಕ್ಕೆ ಸಮರ್ಪಿಸಿದರು. ರಕ್ಷಣಾ ಉತ್ಪಾದನೆಯಲ್ಲಿ ಭಾರತದ ಸ್ವಾವಲಂಬನೆ ಮತ್ತು ರಕ್ಷಣಾ ಸನ್ನದ್ಧತೆಯನ್ನು ಸುಧಾರಿಸುವ ಕ್ರಮವಾಗಿ 200 ವರ್ಷಗಳಿಗೂ ಹಿಂದೆ ಬ್ರಿಟಿಷರ ಕಾಲದಿಂದ ಇದ್ದ ಆರ್ಡ್ನನ್ಸ್ ಫ್ಯಾಕ್ಟರಿ ಬೋರ್ಡನ್ನು ರದ್ದುಗೊಳಿಸಲಾಗಿದ್ದು ಅದರ ಅಡಿಯಲ್ಲಿ ಬರುವ 41 ಕಾರ್ಖಾನೆಗಳನ್ನು ಮರುವಿಂಗಡನೆ ಮಾಡಿ ಹೊಸದಾಗಿ ಏಳು ಸಾರ್ವಜನಿಕ ವಲಯದ ಕಾರ್ಪೊರೇಟ್ ಸಂಸ್ಥೆಗಳಾಗಿ ಪರಿವರ್ತಿಸಲಾಗುತ್ತಿದೆ. 'ಸ್ವಾತಂತ್ರ್ಯದ ನಂತರ ಭಾರತದ ರಕ್ಷಣಾ ವಲಯದಲ್ಲಿ ಹೊಸತನದ ಕೊರತೆಯಿತ್ತು, ಈ ಏಳು ಹೊಸ ಕಂಪನಿಗಳು ರಕ್ಷಣಾ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಲಿವೆ ಮತ್ತು ದೇಶವನ್ನು ಆತ್ಮನಿರ್ಭರತೆಯತ್ತ ಕೊಂಡೊಯ್ಯಲಿವೆ. ಭಾರತೀಯ ಕಂಪನಿಗಳು ತಮ್ಮ ಉತ್ಪನ್ನಗಳಲ್ಲಿ ಪರಿಣತಿಯನ್ನು ಸಾಧಿಸುವುದು ಮಾತ್ರವಲ್ಲದೆ ಜಾಗತಿಕ ಬ್ರಾಂಡ್ ಆಗುವುದೂ ನಮ್ಮ ಗುರಿಯಾಗಿದೆ' ಎಂದು ಮೋದಿ ಹೇಳಿದರು.

---

## 'ಪರಿಕ್ರಮ ಸಂತ'
## ಸೀತಾರಾಮ ಕೆದಿಲಾಯರ ಭಾರತ ಪರಿಕ್ರಮ ಪಾದಯಾತ್ರೆ ಕುರಿತ ಸಾಕ್ಷ್ಯಚಿತ್ರ

ಗ್ರಾಮವಿಕಾಸದ ಸಂದೇಶವನ್ನು ಹೊತ್ತು ಭಾರತವನ್ನು ಕಾಲ್ನಡಿಗೆಯ ಮೂಲಕ ಜೋಡಿಸುವ ಧ್ಯೇಯದೊಂದಿಗೆ ಆರಂಭವಾಗಿ ಇಡೀ ದೇಶವನ್ನೊಮ್ಮೆ ಪ್ರದಕ್ಷಿಣೆ ಹಾಕಿದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಜ್ಯೇಷ್ಠ ಪ್ರಚಾರಕರಾದ ಶ್ರೀ ಸೀತಾರಾಮ ಕೆದಿಯಾಲ ಅವರ 'ಭಾರತ ಪರಿಕ್ರಮ ಯಾತ್ರೆ' ಯಾತ್ರೆಗಳ ಯಾದಿಯಲ್ಲಿ ಒಂದು ಶ್ರೇಷ್ಠ ಮೈಲಿಗಲ್ಲು.



ರಾಷ್ಟ್ರದ ಭವಿಷ್ಯ ಗ್ರಾಮಗಳಲ್ಲಿದೆ. ದೇಶದ ಸಂಸ್ಕೃತಿ, ಮಣ್ಣಿನೊಂದಿಗಿನ ಮಾನವನ ಸಂಬಂಧ, ಜೀವಜಲ, ಪ್ರಾಣಿ ಪಕ್ಷಿ ಸಂಕುಲಗಳ ರಕ್ಷಣೆ, ಆತ್ಮೀಯತೆ, ಭಾವನಾತ್ಮಕ ಸಂಬಂಧಗಳು, ಆಚಾರ ವಿಚಾರಗಳಿಗೆ ಮೂಲವೇ ಗ್ರಾಮಗಳು ಎಂಬುದನ್ನು ಮನಮುಟ್ಟುವ ರೀತಿಯಲ್ಲಿ ತಿಳಿಸುವ ಸಂತ ಸೀತಾರಾಮ ಕೆದಿಲಾಯರು ದೇಶದ ಮೂಲೆಗಳ ಗ್ರಾಮೀಣರನ್ನು ತಲುಪಿ ಗ್ರಾಮಗಳ ಮಹತ್ವವನ್ನು ತಿಳಿಸಿದ ಪರಿ ಅನನ್ಯ. ಆಧುನಿಕ ಕಾಲಘಟ್ಟದಲ್ಲೂ ಗ್ರಾಮಗಳು ದೇಶಕ್ಕೆ ಹೇಗೆ ಮಾದರಿ ಎಂಬುದರ ಬಗ್ಗೆ ಸಂತ ಕೆದಿಲಾಯರು ತಿಳಿಸಿದ್ದಾರೆ.

ಆಗಸ್ಟ್ 9 2012ರಂದು ಕನ್ಯಾಕುಮಾರಿಯಿಂದ ಆರಂಭವಾದ ಭಾರತ ಪರಿಕ್ರಮ ಪಾದಯಾತ್ರೆ ಐದು ವರ್ಷಗಳ ನಂತರ ಸತತ 1797 ದಿನಗಳ ಕಾಲ 23 ರಾಜ್ಯಗಳ 2350 ಗ್ರಾಮಗಳನ್ನು ತಲುಪಿ, 23,100 ಕಿಮೀಗಳ ದೂರವನ್ನು ಕಾಲ್ನಡಿಗೆಯಲ್ಲಿ ಕ್ರಮಿಸಿ ಜುಲೈ 9 2017ರಂದು ಪುನಃ ಕನ್ಯಾಕುಮಾರಿ ತಲುಪಿ ಪರಿಸಮಾಪ್ತಿಗೊಂಡಿತು. ಅಂದು ಯಾತ್ರೆಯ ಕೊನೆಯ ನಡಿಗೆ ಕನ್ಯಾಕುಮಾರಿಯ ವಿವೇಕಾನಂದ ಸ್ಮಾರಕ ಕೇಂದ್ರದಿಂದ ಕನ್ಯಾಕುಮಾರಿ ದೇಗುಲದವರೆಗೆ ಸಂಪನ್ನಗೊಂಡಿತು.

ಇದೀಗ ಭಾರತ ಪರಿಕ್ರಮ ಪಾದಯಾತ್ರೆಯ ಕುರಿತ ಸಾಕ್ಷ್ಯಚಿತ್ರವೊಂದು ಬಿಡುಗಡೆಯಾಗಿದ್ದು ಈ ಯಾತ್ರೆಯ ಹಿನ್ನೆಲೆ, ಉದ್ದೇಶ ಮತ್ತು ಅನುಭವಗಳನ್ನು 'ಪರಿಕ್ರಮ ಸಂತ' ಸೀತಾರಾಮ ಕೆದಿಲಾಯರ ಮಾತಿನಲ್ಲೇ ಹಿಡಿದಿಡಲಾಗಿದೆ. ಸಾಕ್ಷ್ಯಚಿತ್ರವನ್ನು ವೀಕ್ಷಿಸಲು **bit.ly/3AVR3NF** ಈ ಅಂತರ್ಜಾಲ ಕೊಂಡಿಯನ್ನು ಬಳಸಿರಿ ಅಥವಾ ಕೆಳಗಿನ ಕ್ಯೂಆರ್ ಕೋಡನ್ನು ಸ್ಮಾರ್ಟ್‌ಫೋನಿನಲ್ಲಿ ಸ್ಕ್ಯಾನ್ ಮಾಡಿರಿ.

Date of Publication 25 OCTOBER 2021

REGISTERED NEWS PAPER RNI 36528/79 LICENSE TO POST
WITHOUT PREPAYMENT LICENSE NO PMG/BG/WPP-46/2021-2023 AT BENGALURU PSO
BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 01-11-2021

पुंगव PUNGAVA
# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00



# ನಡೆಯುತಿವೆ ಅಗಣಿತ ಚರಣಗಳು ಧ್ಯೇಯ ಪಥದಿ ನಿರಂತರ

**ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ಥಾಪನಾ ದಿವಸ 'ವಿಜಯದಶಮಿ'ಯಂದು ನಾಗಪುರದ ರೇಶಮ್‌ಬಾಗ್ ಮೈದಾನದಲ್ಲಿ ಸರಸಂಘಚಾಲಕ ಡಾ ಮೋಹನ್ ಭಾಗವತ್ ಅವರು ಸ್ವಯಂಸೇವಕರು ಹಾಗೂ ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡಿದರು. ಆರೆಸ್ಸೆಸ್‌ನ ವಿಜಯದಶಮಿ ಉತ್ಸವದಲ್ಲಿ ಸರಸಂಘಚಾಲಕರು ಮಾಡುವ ಭಾಷಣವನ್ನು ಎಲ್ಲೆಡೆ ಗಂಭೀರವಾಗಿ ಗಮನಿಸಲಾಗುತ್ತದೆ. ಸ್ವಾತಂತ್ರ್ಯ–ಸ್ವಾಧಿನತೆ, ರಾಷ್ಟ್ರೀಯ ಸುರಕ್ಷೆ, ಏಕತೆ, ಸಮಾಜ ಸಮರಸತೆ, ಯುವಜನ ಸಂಸ್ಕಾರ, ಕುಟುಂಬ ಪ್ರಭೋದನ, ಪರಿಸರ, ಆರೋಗ್ಯ, ಕೋವಿಡ್ ನಿರ್ವಹಣೆ–ಜಾಗೃತಿ, ಆರ್ಥಿಕ ನೀತಿ, ಮಾತೃಭಾಷೆ, ಹಿಂದೂ ದೇವಾಲಯಗಳು ಹೀಗೆ ಭಾರತದ ರಾಷ್ಟ್ರೀಯ ಜೀವನಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಸರಸಂಘಚಾಲಕರು ವಿಚಾರಗಳನ್ನು ತೆರೆದಿಟ್ಟರು. ಅವರ ಭಾಷಣದ ಕೆಲವು ಪ್ರಮುಖ ಬಿಂದುಗಳನ್ನು ಇಲ್ಲಿ ಸಂಗ್ರಹಿಸಿ ನೀಡಲಾಗಿದೆ.**

### ಸ್ವಾತಂತ್ರ್ಯದ ಅಮೃತ ಮಹೋತ್ಸವ

- ಹಲವಾರು ಜಾತಿ ಸಮುದಾಯಗಳಿಗೆ ಸೇರಿದ, ವಿವಿಧ ಪ್ರದೇಶಗಳಿಗೆ ಸೇರಿದ ಸ್ವಾತಂತ್ರ್ಯ ಹೋರಾಟಗಾರರು ಸ್ವಾತಂತ್ರ್ಯಕ್ಕಾಗಿ ಅನೇಕ ತ್ಯಾಗಗಳನ್ನು ಮಾಡಿದ್ದಾರೆ. ಸ್ವಾತಂತ್ರ್ಯ ನಮಗೆ ರಾತ್ರೋರಾತ್ರಿ ಸಿಗಲಿಲ್ಲ. ಶಾಂತಿಯುತ ಧರಣಿಗಳಿಂದ ಹಿಡಿದು ಸಶಸ್ತ್ರ ಹೋರಾಟಗಳವರೆಗೆ ಎಲ್ಲಾ ವಿಧಾನಗಳು ಅಂತಿಮವಾಗಿ ಸ್ವಾಧಿನತೆಯ ಗುರಿ ಸಾಧಿಸುವಲ್ಲಿ ಪರ್ಯವಸನಗೊಂಡವು. ಅದು ಸ್ವಾಧೀನತೆಯಿಂದ ಸ್ವಾತಂತ್ರ್ಯದೆಡೆಗಿನ ನಮ್ಮ ಪ್ರಯಾಣದ ಆರಂಭದ ಒಂದು ಬಿಂದುವಾಗಿತ್ತು.
- ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿ ದೇಶ ವಿಭಜನೆಯ ಗಾಯದ ಗುರುತು ಉಳಿದುಹೋಗಿದೆ. ಭಾರತದ ಏಕತೆ ಮತ್ತು ಸಮಗ್ರತೆಗಳನ್ನು ಮರುಸ್ಥಾಪಿಸುವ ಕಾರ್ಯದಲ್ಲಿ ತೊಡಗಿಕೊಳ್ಳಲು ನಮ್ಮ ಇಡೀ ಸಮಾಜ, ಮುಖ್ಯವಾಗಿ ತರುಣ ಜನಾಂಗವು, ಈ ಚರಿತ್ರೆಯನ್ನು ಗಮನಿಸಿ, ಅರ್ಥೈಸಿ ನೆನೆಪಿಟ್ಟುಕೊಳ್ಳಬೇಕಾಗಿದೆ.

### ಸಮಾಜದಲ್ಲಿ ಸಮರಸತೆ

- ಸಮಾನತೆಗೆ ಬದ್ಧವಾದ ಮತ್ತು ತಾರತಮ್ಯರಹಿತ ಸಮಾಜವು ದೇಶದ ಏಕತೆ ಮತ್ತು ಸಮಗ್ರತೆಗೆ ಒಂದು ಪೂರ್ವಭಾವೀ ಅಗತ್ಯವಾಗಿದೆ. ಭಾರತದ ಐಕ್ಯತೆ ಮತ್ತು ಸಮಗ್ರತೆಯ ಮೂಲಕ ಮಾನವರೆಲ್ಲರಿಗೂ ಸ್ವಾತಂತ್ರ್ಯವನ್ನು ಒದಗಿಸುವುದೇ ಅನಾದಿಕಾಲದಿಂದಲೂ ಭಾರತೀಯ ಜೀವನದ ಮುಖ್ಯ ಅಂಶವಾಗಿದೆ. ಇಲ್ಲಿಯ ಜನರು ಈ ಗುರಿಗಾಗಿ ಅಕ್ಷರಶಃ ನೆತ್ತರನ್ನು ಬೆವರಾಗಿಸಿದ್ದಾರೆ.
- ಭಾರತದ ಪ್ರಗತಿ ಮತ್ತು ಅದಕ್ಕೆ ದಕ್ಕಬೇಕಾದ ಮಾನ್ಯತೆಗಳು ಪ್ರಪಂಚದ ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಗೆ ಮಾರಕವಾಗಿವೆ. ಈ ಹಿತಾಸಕ್ತಿಗಳು ಹಲವಾರು ದೇಶಗಳಲ್ಲಿ ಪ್ರಭಾವಿಯಾಗಿವೆ. ಸನಾತನ ಮೌಲ್ಯಗಳು ಭಾರತದಲ್ಲಿ ಪ್ರತಿಷ್ಠಾಪಿತವಾಗುವುದರೊಂದಿಗೆ ಸ್ವಾರ್ಥೀ ಶಕ್ತಿಗಳ ದುರ್ವರ್ತನೆಗಳು ಕೊನೆಗೊಳ್ಳುತ್ತವೆ.
- ಭಾರತವು ಧಾರ್ಮಿಕ ದೃಷ್ಟಿಕೋನದಿಂದ ಸಮುದಾಯಗಳನ್ನು ಪ್ರಭಾವಿಸಲಿದ್ದು ಜಗತ್ತಿನ ಸಮತೋಲನವನ್ನು ಪುನಃ ಸ್ಥಾಪಿಸುವ, ಸಹಕಾರ ಪ್ರವೃತ್ತಿಯನ್ನು ಉತ್ತೇಜಿಸುವ ಮತ್ತು ಹರ್ಷದ ವಾತಾವರಣವನ್ನು ನಿರ್ಮಾಣಮಾಡುವ ಸಾಮರ್ಥ್ಯ ಹೊಂದಿದೆ.
- ಪ್ರಪಂಚದಲ್ಲಿ ಭಾರತದ ಬಗ್ಗೆ ಗೊಂದಲ ಸೃಷ್ಟಿಸುವ ಮತ್ತು ಭಾರತೀಯರನ್ನು ಹಾದಿತಪ್ಪಿಸುವ ಪ್ರಯತ್ನಗಳನ್ನು ಅಪಪ್ರಚಾರದ ಮೂಲಕ ಮಾಡಲಾಗುತ್ತಿದೆ. ಬಹಿರಂಗವಾಗಿ ಮತ್ತು ಗೌಪ್ಯವಾಗಿ ಹಲವಾರು ಸಮಾಜವಿರೋಧಿ ಹಿತಾಸಕ್ತಿಗಳು ಒಳ ಒಪ್ಪಂದಗಳೊಂದಿಗೆ ಸಕ್ರಿಯವಾಗಿವೆ.
- ಕಾಲ–ಕಾಲಕ್ಕೆ ಭಾರತ ವಿರೋಧೀ ಹಿತಾಸಕ್ತಿಗಳು ಉದ್ದೇಶ ಬದಲು ಮಾಡಿಕೊಳ್ಳದೇ ಹೊಸ ತಂತ್ರಗಳನ್ನು ಅಳವಡಿಸಿಕೊಳ್ಳುತ್ತಾ ಜನ ಸಮುದಾಯಗಳನ್ನು ದುರುಪಯೋಗಪಡಿಸಿಕೊಳ್ಳುತ್ತಾ ಪರಿಸ್ಥಿತಿಯನ್ನು ಉದ್ರಿಕ್ತಗೊಳಿಸುತ್ತಿದ್ದಾರೆ. ಈ ರೀತಿಯ ಹಲವು ಪ್ರವೃತ್ತಿಗಳು / ಯೋಜನೆಗಳು ಇತ್ತೀಚೆಗೆ ಬಯಲಾಗಿವೆ.
- ಮೋಸದ ಮತ್ತು ಕುತಂತ್ರದ ಯೋಜನೆಗಳನ್ನು ಅರ್ಥಮಾಡಿಕೊಂಡು ಅವುಗಳಿಗೆ ಸಮಾಜವು ಬಲಿಯಾಗದಂತೆ ನೋಡಿಕೊಳ್ಳಬೇಕಾಗಿದೆ.
- ಸಂಘದ ಸ್ವಯಂಸೇವಕರು ಇಂಥಹ ಸಮಾಜದತ್ತ ಕಾರ್ಯತತ್ಪರರಾಗಿದ್ದಾರೆ.

### ಸ್ವಾತಂತ್ರ್ಯ ಹಾಗೂ ನೈತಿಕತೆ

- ಹೊಸ ತಂತ್ರಜ್ಞಾನಾಧಾರಿತ ಸರ್ಕಾರೀ ನಿಯಂತ್ರಣಕ್ಕೊಳಪಡದ ಬಿಟ್ ಕಾಯಿನ್ ರೂಪದ ಹಣವು ಜಾಗತಿಕ ಆರ್ಥಿಕತೆಯನ್ನು ಅಸ್ಥಿರಗೊಳಿಸುವ ಸಂಭವಗಳು ಕಂಡುಬರುತ್ತಿದೆ. ಸರ್ಕಾರವು ಇದರ ಬಗ್ಗೆ ಕಾನೂನು ರಚಿಸಬೇಕಾಗಿದೆ.
- ಮಾಧ್ಯಮ ಮತ್ತು ಸಿನಿಮಾ ರಂಗದಲ್ಲಿ ಓಟಿಟಿ ವೇದಿಕೆಗಳು ಬಂದಿದ್ದು ವಿವೇಚನಾರಹಿತ ವೀಕ್ಷಣೆ ಸಾಧ್ಯವಾಗಿದೆ. ಸರ್ಕಾರವು ಇದರ ಬಗ್ಗೆ ಕಾನೂನು ರಚಿಸಿ ನಿಯಂತ್ರಿಸಬೇಕಾಗಿದೆ.
- ಕರೋನಾ ಸಾಂಕ್ರಾಮಿಕ ಜ್ವರದ ಹಿನ್ನೆಲೆಯಲ್ಲಿ ಶಿಕ್ಷಣವು ಅಂತರ್ಜಾಲದ ಮೂಲಕ ನಡೆಸಲಾಗುತ್ತಿದೆ. ಶಾಲಾ ವಿದ್ಯಾರ್ಥಿಗಳು ಮೊಬೈಲ್ ಉಪಕರಣಗಳನ್ನು ಉಪಯೋಗಿಸುತ್ತಿದ್ದು ಈ ವಿಚಾರದಲ್ಲಿ ವ್ಯಾವಹಾರಿಕ ವಿವೇಚನೆ ಬೇಕಾಗಿದೆ. ಸರ್ಕಾರವು ಈ ವಿಚಾರಗಳ ಬಗ್ಗೆ ಕಾನೂನು ಮತ್ತು ಮಾರ್ಗದರ್ಶೀ ಸೂತ್ರಗಳನ್ನು ರಚಿಸಬೇಕಾಗಿದೆ.
- ನಮಗೆ ಯಾವುದೇ ಭಾಷೆಯ ಬಗ್ಗೆಯೂ ದ್ವೇಷವಿಲ್ಲ. ಆದರೆ, ಸಾಧ್ಯವಾದಷ್ಟರ ಮಟ್ಟಿಗೆ ಮಾತೃಭಾಷೆ ಬಳಕೆಯನ್ನು ಪ್ರಯತ್ನಿಸಬಹುದೇ? ಹಸ್ತಾಕ್ಷರವನ್ನು ಮಾತೃಭಾಷೆಯಲ್ಲಿ ಮಾಡುವ ಪ್ರಯತ್ನ ಮಾಡಬಹುದೇ? ಸ್ವಭಾಷಾ, ಸ್ವಭೂಷ, ಸ್ವ ಭಜನ್, ಸ್ವಭೋಜನ ಇವುಗಳನ್ನು ಅನುಸರಿಸಿ ನಮ್ಮ ಪರಂಪರೆಯನ್ನು ಅರ್ಥ ಮಾಡಿಕೊಳ್ಳುವ ಕೆಲಸ ಮಾಡಬೇಕಿದೆ






ವಿಜಯದಶಮಿ ಉತ್ಸವ ಆಚರಣೆಯ ಅಂಗವಾಗಿ ನಡೆದ ಸ್ವಯಂಸೇವಕರ ಘೋಷ್ ಪ್ರದರ್ಶನದ ಚಿತ್ತಾಕರ್ಷಕ ಸಂರಚನೆ.

### ಕುಟುಂಬ ಪ್ರಬೋಧನ್

ಸರಿ–ತಪ್ಪುಗಳನ್ನೂ, ನೀತಿ–ಅನೀತಿಗಳನ್ನೂ ನಿಖರವಾಗಿ ಗುರುತಿಸುವ ವಾತಾವರಣವನ್ನು ನಮ್ಮ ಮನೆಗಳಲ್ಲಿ ನಿರ್ಮಿಸಬೇಕಾಗಿದೆ. ಸಾಮಾಜಿಕವಾಗಿ ಹಲವಾರು ಧಾರ್ಮಿಕ/ಸಾಮಾಜಿಕ ನೇತಾರರು ಸಮಾಜಕ್ಕೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಕುಟುಂಬಗಳಲ್ಲಿ ಸಹ ಈ ಚರ್ಚೆಯನ್ನು ಗಮನಿಸಿ ಸರಿ–ತಪ್ಪುಗಳ ಬಗ್ಗೆ ಕುಟುಂಬದ ಸದಸ್ಯರೆಲ್ಲರಲ್ಲಿ ಒಮ್ಮತ ಮೂಡುವ ಅಗತ್ಯ ಇದೆ.

### ಕೋರೋನ ವಿರುದ್ಧ ಸಮರ

- ಕರೋನಾದ ಎರಡನೇ ಅಲೆ ಅನಾಹುತಕಾರಿಯಾಗಿತ್ತು. ಆದರೆ, ಸಮಾಜ ಅದನ್ನು ಯಶಸ್ವಿಯಾಗಿ ಎದುರಿಸಿತು. ಈಗ ನಾವು ಬರಬಹುದಾದ ಮೂರನೇ ಅಲೆಯನ್ನು ನಿರ್ವಹಿಸಲು ಸಜ್ಜಾಗುತ್ತಿದ್ದೇವೆ.
- ಸಂಘದ ಸ್ವಯಂಸೇವಕರು ಮತ್ತು ಇತರ ಸ್ವಯಂಸೇವ ಸಂಸ್ಥೆಗಳು ಕರೋನಾ ವಿರುದ್ಧದ ದೇಶದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದಾರೆ
- ಸರ್ಕಾರ ಮತ್ತು ಸಮಾಜದ ಪ್ರಯತ್ನಗಳಿಂದ ಕರೋನಾ ಅಲೆಗಳಿಂದ ಉಂಟಾದ ನಷ್ಟವನ್ನು ತುಂಬಿಕೊಳ್ಳುವ ಹಾದಿಯಲ್ಲಿ ಭಾರತ ಇದೆ.
- ಕೋವಿಡ್ ಸಾಂಕ್ರಾಮಿಕವು ನಮ್ಮ ಸ್ವ ಅಥವಾ ಸ್ವಾವಲಂಬನೆಯನ್ನು ಪುನಃ ಪಡೆಯಲು ಒಂದು ಅವಕಾಶವನ್ನೂ ಒದಗಿಸಿ ಕೊಟ್ಟಿದೆ.
- ಆಯುರ್ವೇದದಂಥ ದೇಶೀಯ ವೈದ್ಯಕೀಯ ಪದ್ಧತಿಗಳ ಮಹತ್ವವನ್ನು ಗಮನಿಸಿ, ಆರೋಗ್ಯ ವ್ಯವಸ್ಥೆಯನ್ನು ಪುನರ್ನಿಮಾಣ ಮಾಡುವ ಅಗತ್ಯ ಕೋವಿಡ್ ನಂತರದಲ್ಲಿ ನಮ್ಮ ಮುಂದೆ ಇದೆ.

### ಭಾರತೀಯ ದೃಷ್ಟಿಕೋನದಲ್ಲಿ ಆರೋಗ್ಯ

- ಆಹಾರದ ಸಮತೋಲನತೆ, ದೈಹಿಕ ಮತ್ತುಉಸಿರಾಟದ ವ್ಯಾಯಾಮಗಳು, ಧ್ಯಾನ ಮತ್ತು ವಿಶ್ರಾಂತಿ ಗಳು ಭಾರತೀಯ ದೃಷ್ಟಿಕೋನದಲ್ಲಿ ಸ್ವಾಸ್ಥ್ಯಕ್ಕೆ ಮೂಲ ಸೂತ್ರಗಳಾಗಿವೆ.
- ಕೋವಿಡ್ ನಂತರದ ಸಂದರ್ಭದಲ್ಲಿ ಪರಿಸರ ಸ್ನೇಹೀ, ಸಂತುಲಿತ ಆರೋಗ್ಯದ ಪರಿಕಲ್ಪನೆಯನ್ನು ನಾವು ಪ್ರೋತ್ಸಾಹಿಸಬೇಕಾಗಿದೆ.
- ಸಂಘದ ಸ್ವಯಂಸೇವಕರು ಪರಿಸರ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿದ್ದು, ಜಲಸಂರಕ್ಷಣೆ, ಸಸ್ಯಗಳ ಅಭಿವೃದ್ಧಿ ಮತ್ತು ಪ್ಲಾಸ್ಟಿಕ್ ಬಳಕೆಯ ತ್ಯಜಿಸುವಿಕೆಯ ಬಗ್ಗೆ ಜನಾಭಿಪ್ರಾಯ ರೂಪಿಸುತ್ತಿದ್ದಾರೆ.

### ಆರ್ಥಿಕತೆ

- ಧಾರ್ಮಿಕ ನೆಲೆಯಲ್ಲಿ ಭಾರತದ ನೇತೃತ್ವವನ್ನು ಜಗತ್ತು ಇಂದು ನಿರೀಕ್ಷಿಸುತ್ತಿದೆ.
- ಧರ್ಮ, ಸಂಪನ್ಮೂಲಗಳು ನ್ಯಾಸವೆಂದು ಪರಿಗಣನೆ, ನಿಯಂತ್ರಿತ ಉಪಯೋಗ, ಎಲ್ಲರಿಗೂ ಉದ್ಯೋಗ, ಎಲ್ಲಾ ಹಿತಾಸಕ್ತಿಗಳ ಪರಿಗಣನೆ – ಇವು ಭಾರತೀಯ ದೃಷ್ಟಿಕೋನದ ಕೇಂದ್ರ ಬಿಂದು.
- ದೇಶೀಯ ಸಾಮಾಜಿಕ–ಆರ್ಥಿಕ ಮಾದರಿಯನ್ನು ನಮ್ಮ 'ಸ್ವ'ದ ಅರ್ಥೈಸುವಿಕೆಯ ಮೇಲೆ ಮಾಡಬೇಕಿದೆ.
- ಸಂಪನ್ಮೂಲಗಳ ಕೊರತೆಯನ್ನು ಉಂಟುಮಾಡುವ ಜನಸಂಖ್ಯೆಯ ಬೆಳವಣಿಗೆ ಮತ್ತು ಅಸಮತೋಲನವನ್ನು 2015 ರ ಅಖಿಲ ಭಾರತೀಯ ಕಾರ್ಯಕಾರೀ ಮಂಡಳಿಯ ನಿರ್ಣಯವು ಉದ್ದೇಶಿಸಿತ್ತು.

### ಜನಸಂಖ್ಯೆ

ಜನಸಂಖ್ಯಾ ಅಸಮತೋಲನವು ಸರ್ಕಾರಗಳನ್ನು ತುಷ್ಟೀಕರಣ ನೀತಿಯೆಡೆ ತಳ್ಳುತ್ತದೆ ಎಂಬುದನ್ನೂ, ಅದರಿಂದ ಕೆಲವು ಸಮುದಾಯಗಳು ತೊಂದರೆಗೆ ಒಳಗಾಗುತ್ತವೆ ಎಂಬುದನ್ನೂ ಬೆಂಗಾಲದ ಹಿಂದೂಗಳ ಉದಾಹರಣೆಯ ಮೂಲಕ ನೋಡಬಹುದಾಗಿದೆ.

### ಭಯೋತ್ಪಾದನೆ

- ಇಸ್ಲಾಂ ಹೆಸರಿನಲ್ಲಿ ಅಸಹಿಷ್ಣುತೆ, ಹಿಂಸಾಚಾರ ಮತ್ತು ಭಯೋತ್ಪಾದನೆ ನಡೆಸುತ್ತಿರುವ ತಾಲೀಬಾನ್‌ಗೆ ಪಾಕಿಸ್ತಾನ, ಟರ್ಕಿ ಮತ್ತು ಚೀನಾ ದೇಶಗಳು ಒಂದಾಗಿ ಬೆಂಬಲ ನೀಡುತ್ತಿದ್ದಾರೆ.
- ಜಮ್ಮು ಮತ್ತು ಕಾಶ್ಮೀರದ ನಾಗರಿಕರು ಗುರುತಿಸಿ ಕೊಲ್ಲುತ್ತಿರುವ ಭಯೋತ್ಪಾದಕರ ವಿರುದ್ಧ ಹೋರಾಡುತ್ತಿದ್ದು ಅವರಿಗೆ ಇಡೀ ದೇಶದ ಬೆಂಬಲ ಬೇಕಾಗಿದೆ.

### ಹಿಂದೂ ದೇವಾಲಯಗಳು

- ಹಿಂದೂ ದೇವಾಲಯಗಳ ಈಗಿನ ಸ್ಥಿತಿ ಸಮಾಜದ ಚಿಂತೆಗೆ ಕಾರಣವಾಗಿದೆ. ಹಲವಾರು ದೇವಾಲಯಗಳು, ಮುಖ್ಯವಾಗಿ ದಕ್ಷಿಣ ಭಾರತದಲ್ಲಿರುವ ದೇವಾಲಯಗಳು ರಾಜ್ಯ ಸರ್ಕಾರಗಳ ನಿಯಂತ್ರಣದಲ್ಲಿ ಇದ್ದು ಅನೇಕ ರೀತಿಯ ಪಕ್ಷಪಾತಗಳಿಗೆ ಒಳಗಾಗಿವೆ.
- ದೇವಾಲಯಗಳ ಸ್ವತ್ತುಗಳು ಕಾನೂನಿಗೆ ವಿರುದ್ಧವಾಗಿ ಅತಿಕ್ರಮಣ ಆಗುತ್ತಿದ್ದು, ಧಾರ್ಮಿಕ ಶ್ರದ್ಧೆ ಇಲ್ಲದ ವ್ಯಕ್ತಿಗಳನ್ನು ದೇವಾಲಯಗಳ ಆಡಳಿತಮಂಡಳಿಗೆ ನೇಮಕಮಾಡಲಾಗುತ್ತಿದೆ. ಇವುಗಳು ನಿಲ್ಲಬೇಕು.
- ಹಿಂದೂ ದೇವಾಲಯಗಳು ಸಾಮಾಜಿಕ–ಸಾಂಸ್ಕೃತಿಕ ಕೇಂದ್ರಗಳಾಗಿ ಪುನಃ ಪರಿಗಣಿಸಲ್ಪಡಬೇಕು ಮತ್ತು ಅವುಗಳ ಆಡಳಿತವನ್ನು ಭಕ್ತರಿಗೆ ಒಪ್ಪಿಸಬೇಕು.

### ಏಕತೆ

- ಈಗಿನ ಸವಾಲಿನ ಪರಿಸ್ಥಿತಿಯಲ್ಲಿ, ಭಾರತದ ಸನಾತನ ರಾಷ್ಟ್ರದ ಸಾರ್ವಕಾಲೀನ ಸ್ವಭಾವದ ಬಗ್ಗೆ ಅರಿವು ಬೇಕಾಗಿದೆ.
- ನಂಬಿಕೆ, ಪೂಜಾವಿಧಾನ ಮತ್ತಿತರ ವೈವಿಧ್ಯಗಳಿರುವ ಭಾರತೀಯ ಸಮಾಜವು ನಿರಂತರವಾದ ಒಂದೇ ನಾಗರೀಕತೆ, ಸಂಸ್ಕೃತಿ ಮತ್ತು ಚರಿತ್ರೆಯನ್ನು ಹೊಂದಿದೆ. ವಿದೇಶೀ ಆಕ್ರಮಣಕಾರರು ಹಲವು ಮತಗಳನ್ನು ಭಾರತಕ್ಕೆ ತಂದರೂ, ಭಾರತೀಯರೆಲ್ಲರ ಪೂರ್ವಜರು ಒಬ್ಬರೇ ಆಗಿದ್ದಾರೆ.

### ಸಂಘಟಿತ ಹಿಂದೂ ಸಮಾಜ

- ಸಂಘಟಿತ ಹಿಂದೂ ಸಮಾಜವು ಮಾತ್ರ ಭಾರತ ವಿರೋಧೀ ಶಕ್ತಿಗಳಿಂದ ರಕ್ಷಣೆ ಒದಗಿಸಬಲ್ಲುದು. ಜಾಗೃತ, ಒಗ್ಗೂಡಿದ, ಬಲಿಷ್ಠ ಮತ್ತು ಚಲನಶೀಲ ಸಮಾಜವೇ ನಮ್ಮ ಎಲ್ಲಾ ಸಮಸ್ಯೆಗಳಿಗೆ ಉತ್ತರವಾಗಿದೆ.
- ನಮ್ಮ ಸಮಾಜದ ಏಕತೆಯ ಸೂತ್ರವೆಂದರೆ ನಮ್ಮ ಸಂಸ್ಕೃತಿ, ನಮ್ಮ ಪೂರ್ವಜರ ವೈಭವ ಮತ್ತು ನಮ್ಮ ತಾಯ್ನಾಡಿನ ಬಗೆಗೆ ನಮ್ಮ ಹೃದಯದಲ್ಲಿ ಮೂಡುವ ಪರಿಶುದ್ಧ ಭಕ್ತಿ. 'ಹಿಂದು' ಎಂಬ ಪದವು ಈ ಅರ್ಥದ ಅಭಿವ್ಯಕ್ತಿಯಾಗಿದೆ. ನಾವೆಲ್ಲರೂ ಈ ಮೂರು ತತ್ವಗಳನ್ನು ಮೇಳೈಸಿಕೊಂಡು ನಮ್ಮ ಅನನ್ಯತೆಯ ಅಂತರ್ಗತವಾದ ಶಾಶ್ವತ ಏಕತೆಯ ಸೂತ್ರದಿಂದ ಸಂಪೂರ್ಣ ದೇಶವನ್ನು ನಿರ್ಮಿಸಬೇಕಾಗಿದೆ.
- ಇದೇ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯವಾಗಿದೆ. ಈ ಗುರಿಸಾಧನೆಗಾಗಿಯೇ, ಸಂಘವು ಕಳೆದ ತೊಂಭತ್ತಾರು ವರ್ಷಗಳಿಂದ ದುಡಿಯುತ್ತಿದೆ ಮತ್ತು ಅಪೇಕ್ಷಿತ ಗುರಿಯನ್ನು ಸಾಧಿಸುವವರೆಗೆ ಅದನ್ನು ಮುಂದುವರಿಸುತ್ತದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.